Mr. SPEAKER.—The question is :

"That the Mysore Prisons Bill, 1962, as amended, be passed."

The motion was adopted.

THE MYSORE PRISONERS BILL, 1962.

Motion to consider.

Sri R. M. PATIL.—Sir, I beg to move :

"That the Mysore Prisoners Bill, 1962, be taken into consideration."

Mr. SPEAKER.—Motion moved:

"That the Mysore Prisoners Bill, 1962, be taken into consideration."

Sri R. M. PATIL.—Sir, ptill now we considered the management, accommodation, sanitary conditions, health conditions and the improvements of the prisoners within the premises of the prisons. Now, we are to consider the prisoners. So far as the provisions of this Bill are concerned, it is very simple and it provides as usual, the definations, officers who are in charge of the prisons and the way of removel and also mental conditions of the prisoners. At present, there are four types of legislations; the Prisoners Act of 1900 as in force in Bombay area, Madras area and Coorg District, the Hydrabad Prisoners Act of 1954 as in force in the Hydrabad Karnatak area, the Mysore Transfer of Prisoners Act, 1954 as in force in the old Mysore area and Section 57 (a) of the Mysore prisons Act, 1943 as adopted by the Mosore Adaptation of Laws Order, 1956 as in force in Mysore area. To have a uniform law and to make all these provisions in to one codified law, this Bill has been introduced and it may be kindly taken into consideration by this August House.

An HON'BLE MEMBER.—May I know what is the time allotted for this Bill, Sir ?

Mr. SPEAKER.—We have allotted three hours for this Bill.

2-00 P.M.

† ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಬಂದೀಖಾನೆಗಳಿಗೆ ಸಂಬಂಧಪಟ್ಟ ಮಸೂದೆ ಈಗ ತಾನೆ ಈ ಸಭೆಯಲ್ಲಿ ಅಂಗೀಕಾರವಾಗಿದೆ. ತಕ್ಷಣದಲ್ಲೇ ಬಂದಿಗಳಿಗೆ ಸಂಭಂಧಪಟ್ಟ ಹಾಗೆ ಇನ್ನೊಂದು ಮಸೂದೆಯನ್ನು ಸರ್ಕಾರದವರು ಸಭೆಯ ಪರಿಶೀಲನೆಗಾಗಿ ಮಂಡಿಸಿದ್ದಾರೆ. ಬಂದಿ ಮತ್ತು ಬಂದಿಖಾನೆ ಎರಡೂ ಒಂದೇ ವಿಷಯದ ಅವಿಭಾಜ್ಯ ಅಂಗಗಳು ಎಂದು ನಾನು ತಿಳಿದು ಕೊಳ್ಳುತ್ತೇನೆ. ಬಂದಿಗಳಿಲ್ಲದೆ ಇದ್ದರೆ ಬಂದಿಖಾನೆಯ ಅವಶ್ಯಕತೆ ಇರುವುದಿಲ್ಲ. ಈಗ ಬಂದಿಖಾನೆ ಗಳು ಹೇಗಿವೆ, ಹೇಗೆ ಇರಬೇಕು ಎನ್ನುವುದರ ಬಗ್ಗೆ ನಾವು ಸಾಕಷ್ಟು ಚರ್ಚೆ ಈ ಮೊದಲು ಮಾಡಿ

(ಶ್ರೀ ಎಸ್. ಗೋಪಾಲಗೌಡ)

ದ್ದೇವೆ. ಈ ಬಂದಿಗಳು ಯಾವರೀತಿಯಲ್ಲಿ ಬಂದೀಖಾನೆಗಳಿಗೆ ಸೇರಿಸಲ್ಪಡಬೇಕು ಮತ್ತು ಅವರನ್ನು ಹೇಗೆ ನೋಡಿಕೊಳ್ಳಬೇಕು, ಅದರಲ್ಲಿ ಹುಚ್ಚರಿದ್ದರೆ ಅವರ ವಿಷಯದಲ್ಲಿ ಅಧಿಕಾರಿಗಳು ಹೇಗೆ ವರ್ತಿಸ ಬೇಕು, ಈ ವಿಷಯಗಳನ್ನು ಈ ಮಸೂದೆಯಲ್ಲಿ ತರಲಾಗಿದೆ. ಒಂದು ವಿಷಯ ಕೆಲವರು ಏನು ಆಶಿಸಿದರು ಎಂದರೆ ಸ್ವಾತಂತ್ರ್ಯ ಬಂದ ಮೇಲೆ ಸಾಮಾನ್ಯವಾಗಿ ಬಂದೀಖಾನೆಗಳಲ್ಲಿ ಸುಧಾರಣೆ ಗಳನ್ನು ತರಬಹುದು ಎನ್ನುವ ಒಂದು ಅಭಿಪ್ರಾಯವಿತ್ತು. ರಾಮನಗರದ ಮಾನ್ಯ ಸದಸ್ಯರು ಏನು ಅಭಿಪ್ರಾಯ ಪಡುತ್ತಾರೋ! ಅವರು ಇವತ್ತು ಹಾಜರಿದ್ದಾರೆ. ಅವರ ಭಯದಿಂದ, ನನಗೆ ಶಿಕ್ಷೆಯಾಗುತ್ತದೆ, ಬಹಳ ಉಗ್ರವಾದ ಶಿಕ್ಷೆಗಳಿರುವುದರಿಂದ ಬಂದೀಖಾನೆಗಳಲ್ಲಿ ಬಹಳ ಕಠಿಣವಾದ ಶಿಕ್ಷೆಗಳನ್ನು ಅನುಭವಿಸಬೇಕಾಗುತ್ತದೆ ಎನ್ನುವ ಭಯದಿಂದ ಜನರು ತಕ್ಸೀರುಗಳನ್ನು ಮಾಡುವುದನ್ನು ಬಿಡುವಂಥ ಆ ರೀತಿಯ ಭಯ ಹುಟ್ಟಿಸತಕ್ಕ ಬಂದೀಖಾನೆಗಳನ್ನು ನಡೆಸಿಕೊಂಡು ಹೋಗಬೇಕು ಎನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವಾಗಿತ್ತು ಎಂದು ನಾನು ಭಾವಿಸುತ್ತೇನೆ. ಮೊನ್ನೆ ಆ ತರಹ ಹೇಳಿದರು.

ಯಾವ ಸಮಾಜದಲ್ಲಿ ಶೋಷಣೆ, ಯಾವ ಸಮಾಜದಲ್ಲಿ ಹೊಟ್ಟೆಗೆ ಬಟ್ಟೆಗೆ ಇಲ್ಲದೆ ಇರತಕ್ಕ ಜನರು ಅವಿದ್ಯಾವಂತರು ಇರುತ್ತಾರೆ, ಯಾವ ಸಮಾಜದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಏರುಪೇರುಗಳು ಹೆಚ್ಚಾಗಿರುತ್ತವೆ ಆ ಸಮಾಜದಲ್ಲಿ ಅಂಥ ತಕ್ಸೀರುಗಳು ಹೆಚ್ಚಾಗಿ ನಡೆಯುತ್ತವೆ. ಸಿವಿಲ್ ಕೋರ್ಟು ಗಳಿಗೆ ಹೋಗುವುದು ಎಂದು ಮಾನ್ಯ ಸದಸ್ಯರು ಹೇಳಬಹುದು; ಜೈಲಿನ ಭತ್ಯೆ ಕಟ್ಟಿಸುವುದು ಎಂದು. ರಾಮನಗರದ ಸದಸ್ಯರು ಹಿಂದೆ ಜೈಲು ಭತ್ಯವನ್ನು ಕಟ್ಟಿದವರು ಇರಬಹುದು. ಸ್ವಾತಂತ್ರ್ಯ ಬಂದಮೇಲೂ ಕೂಡ ಒಬ್ಬ ಮನುಷ್ಯನ ಸಾಲಗಾರ ಯಾರನ್ನಾದರೂ ಜೈಲು ಭತ್ಯ ಕಟ್ಟಿಸಬಹುದು. ನಾನು ಹುಡುಗನಾಗಿದ್ದಾಗ ಹೆದರಿಸುತ್ತಿದ್ದರು ಆ ಗೌಡನಿಗೆ ಜೈಲು ಭತ್ಯ ಆಯಿತಂತೆ ಎಂದು. ಅದು ಬಹಳ ಅವಮಾನಕರವಾದ ವಿಷಯವೆಂದು ಆಗಿನ ಕಾಲದಲ್ಲಿ ಪರಿಗಣಿಸುತ್ತಿದ್ದರು. ಅಂಥ ಕೆಲವು ವಿಧಗಳನ್ನು ಜೈಲು ಭತ್ಯ ಕಟ್ಟಿಸುವುದು, ಮುಂತಾದ ವಿಧಿಗಳನ್ನು ಉಳಿಸಿ ಕೊಂಡಿದ್ದಾರೆ. ಹಾಗೆಯೇ ನಮ್ಮ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ನೋಡಿದರೆ ಅವು ಹೆಚ್ಚಿಗೆ ಇಂದಿನ ಸಮಾಜದಲ್ಲಿರತಕ್ಕ ಅನಿಷ್ಟಕಾರಕ ಶಕ್ತಿಗಳು, ಕೆಲವು ಕಾರ್ಯಗತ ಮಾಡುವುದಕ್ಕೆ ಆಗದೆ ಇರತಕ್ಕ ಅಸಂಬದ್ಧ ಕಾನೂನುಗಳೂ ಆಗಿವೆ. ಅದಕ್ಕೆ ಪಾನನಿರೋಧ ಶಾಸನ ಒಂದು ಉದಾಹರಣೆ. ಆ ಒಂದು ಕಾನೂನು ಎಷ್ಟು ಅಸಂಬದ್ಧವಾಗಿದೆ ಎಂದರೆ ಬೆಂಗಳೂರಿನಲ್ಲಿ ಜನ ಸಾರೋದ್ಧಾರವಾಗಿ ಕುಡಿಯಬಹುದು, ಯಾವುದೋ ಒಂದು ಕರೆಯ ಆಚೆ ಹೋದಮೇಲೆ ಕುಡಿಯ ಬಾರದು ಎನ್ನುವುದಿದೆ. ಆ ಮೇಲೆ ಸರ್ಕಾರ ಪರ್ಮಿಟ್ ಕೊಟ್ಟು ಎಲ್ಲ ತರಹ ಸಾರಾಯಿಗಳನ್ನೂ, ಹೆಂಡಗಳನ್ನೂ ತಯಾರು ಮಾಡುವುದಕ್ಕೆ ಒಂದು ಕಡೆ ಅವಕಾಶ ಕೊಡುತ್ತದೆ ಅದನ್ನು ಯಾರು ಕುಡಿಯಬಹುದು? ಹೇಗೆ ಕುಡಿಯಬಹುದು ಎನ್ನುವುದರ ಕಡೆ ಯೋಚನೆ ಮಾಡುವುದಿಲ್ಲ. ಇಂಥ ಕಾನೂನುಗಳು ... ...

ಅಧ್ಯಕ್ಷರು.—ಯಾರು ಎಂದು ಅರ್ಥವಾಗುತ್ತದೆ, ಹೇಗೆ ಎಂದು ಅರ್ಥವಾಗಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಾನೂನು ಯಾವತ್ತಿಗೂ ಸಮಗ್ರವಾಗಿರಬೇಕು. ಸರ್ಕಾರ ಅಂದಮೇಲೆ ಅದಕ್ಕೆ ಎಲ್ಲ ಇಲಾಖೆಗಳೂ ಸಂಬಂಧ ಪಟ್ಟಿರುತ್ತವೆ. ಉತ್ಪಾದನೆ ವಿಷಯದಲ್ಲಿ ಮಾತನಾಡುವಾಗ ಅದರ ಹಂಚಿಕೆ ವಿಷಯದಲ್ಲಿಯೂ ಮಾತನಾಡಬೇಕು, ಹಂಚಿಕೆ ವಿಷಯದಲ್ಲಿ ಮಾತನಾಡುವಾಗ ಅದರ ಪರಿಣಾಮ ಪ್ರಜೆಗಳ ಮೇಲೆ ಏನಾಗುತ್ತದೆ ಎಂದು ಯೋಚನೆ ಮಾಡಬೇಕಾಗುತ್ತದೆ. ಹಾಗೆ ಒಂದು ಸಮಸ್ಯೆಯನ್ನು ನಾವು ಆಮೂಲಾಗ್ರವಾಗಿ ಪರಿಶೀಲನೆ ಮಾಡುತ್ತಾ ಹೋದರೆ ಅದರಿಂದ ಉದ್ಭವಿಸಬಹುದಾದ ಎಲ್ಲ ಸಮಸ್ಯೆ ಗಳಿಗೂ ಸರ್ಕಾರ ಸಮಂಜಸವಾದ ಉತ್ತರವನ್ನು ಕೊಟ್ಟು ತೃಪ್ತಿದಾಯಕವಾಗಿ ತನ್ನ ಒಂದು ನಿಲು ವನ್ನು ಸಮರ್ಥಿಸಿಕೊಳ್ಳತಕ್ಕ ಸ್ಥಿತಿಯಲ್ಲಿರಬಹುದು. ಇಂಥ ಎಷ್ಟು ಕಾನೂನುಗಳನ್ನು ಮಾಡಿ ದ್ದಾರೆ? ಸಾಗರ ಶಿವಮೊಗ್ಗ ಕಡೆ ಹೋಗಿ ನೋಡಿದರೆ ಮ್ಯಾಜಿಸ್ಟ್ರೇಟ್ ಕೋರ್ಟುಗಳು ಹೆಂಡದ ಮಡಿಕೆಗಳು, ಬೆಲ್ಲದ ಪಾತ್ರೆಗಳು, ಇವುಗಳಿಂದ ತುಂಬಿ ಅಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗದ ಸ್ಥಿತಿಯಲ್ಲಿವೆ. ರೈತರು ಬೇರೆ ಕೆಲಸಗಳನ್ನು ಮಾಡಿ ಜೀವನ ಮಾಡುತ್ತಿದ್ದರೂ ಅವರುಗಳು ನೂರಾರು ಜನರು ಅಲ್ಲಿರುವುದನ್ನು ನಾವು ನೋಡಬಹುದು. ಇದರಿಂದ ಈ ಬಂದೀಖಾನೆಗಳನ್ನು ತುಂಬಿಸತಕ್ಕಂಥ ಮನುಷ್ಯನಿಗೆ ನ್ಯಾಯವಾದ, ಮರ್ಯಾದೆಯ ಜೀವನ ನಡೆಸಿಕೊಂಡು ಹೋಗುವು ದಕ್ಕೆ ಅವಕಾಶವನ್ನು ಕಲ್ಪಿಸಿಕೊಡದೆ ಇರತಕ್ಕ ಸಮಾಜದಲ್ಲಿ ಇಂಥ ತಕ್ಸೀರುಗಳು ಅನಿವಾರ್ಯವಾಗಿ ಪ್ರತಿನಿತ್ಯವೂ, ಪದೇ ಪದೇ ಆಗುತ್ತಲೇ ಇರುತ್ತವೆ. ಈ ಬಂದೀಖಾನೆಗಳಲ್ಲಿ ಮನುಷ್ಯ ಸ್ವಭಾವದ

ತೀವ್ರ ಉತ್ಕಟ ಉದ್ವೇಗದಿಂದ ಉಂಟಾಗತಕ್ಕ ಕೆಲವು ಕೊಲೆಗಳು ಮತ್ತು ಉದ್ದೇಶಪೂರ್ವಕವಾಗಿ ಮಾಡತಕ್ಕ ಢಕಾಯಿತಿಗಳು ಅಥವಾ ಬೇರೆ ಹಿಂಸೆಯಲ್ಲಿ ತೊಡಗತಕ್ಕ ಜನರ ಕೆಲವು ತಕ್ಸೀರುಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಹೋದರೆ ಉಳಿದ ಸಾಮಾನ್ಯವಾದ ತಕ್ಸೀರುಗಳು ನಮ್ಮ ಸಮಾಜ ಹಸನಾದರೆ, ಆ ಒಂದು ಸಮಾಜದ ಛಿನ್ನತೆಯನ್ನು ಸಮಾನತೆಯ ಆಧಾರದ ಮೇಲೆ ಪುನಃ ರೂಪಿಸುವುದಾದರೆ, ಮನುಷ್ಯ ಎನ್ನಿಸಿಕೊಂಡವನಿಗೆ ವ್ಯವಹಾರದಲ್ಲೇ ಸಮಾನವಾದ ವಿವರಣೆ ರೂಪಿಸುವುದಾದರೆ ಅನೇಕ ಕಾನೂನುಗಳು, ತಕ್ಸೀರುಗಳು ಅರ್ಥಹೀನವಾಗುತ್ತವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸ್ವಾಮಿ, ಬಂದಿ, ಸಾಮಾನ್ಯವಾದ ಮನುಷ್ಯ ಯಾವ ತಕ್ಸೀರನ್ನೂ ಮಾಡಬಾರದು ಅಂತ ಇರುತ್ತಾನೆ. ತಕ್ಸೀರು ಮಾಡುವುದು ಸಾಮಾನ್ಯವಾಗಿ ಮನುಷ್ಯ ಸ್ವಭಾವಕ್ಕೆ ವಿರುದ್ಧವೆಂದು ಹೇಳಬಹುದು; ಮತ್ತು ಜೈಲಿಗೆ ಹೋಗುವಂಥ ತಕ್ಸೀರು ಎಂದು ಸಾಮಾನ್ಯವಾಗಿ ಜನರು ಅದನ್ನು ಮಾಡುವುದಕ್ಕೆ ಯಾರೂ ಇಷ್ಟಪಡುವುದಿಲ್ಲ. ಹಾಗೆಯೇ ಇವತ್ತು ನಾವು ನೋಡುವುದಾದರೆ ಬಂದೀಖಾನೆಯ ವಿಷಯದಲ್ಲಿ ಮಾತನಾಡುವಾಗ ನ್ಯಾಯಾಲಯಗಳು, ಕಾನೂನು ಮತ್ತು ಕಾನೂನನ್ನು ಪರಿಪಾಲನೆ ಮಾಡಿಸತಕ್ಕ ಪೋಲೀಸು ಇವು ಜೈಲಿನ ಸುತ್ತಲೂ ಆವರಿಸಿಕೊಂಡಿರುವುದಾಗಿರುತ್ತವೆ. ನಮ್ಮಲ್ಲಿ ಕೆಲವು ಕಳವು ಮಾಡತಕ್ಕದ್ದು, ಸಣ್ಣ ಸಣ್ಣ ತಪ್ಪುಗಳನ್ನು ಮಾಡಿ ಜೈಲಿಗೆ ಹೋಗತಕ್ಕದ್ದು ಇವುಗಳನ್ನು ಪರಿಶೀಲನೆ ಮಾಡಿದರೆ ಅವರು ಒಮ್ಮೆ ತಪ್ಪಿನ ಅಪಾದನೆಗೆ ಗುರಿಯಾಗಿ, ಶಿಕ್ಷೆಯಾಗಿ ಜೈಲಿಗೆ ಹೋಗಿ ಹೊರ ಬಂದರು ಎಂದರೆ ಅವರು ಜೀವಮಾನ ಪರ್ಯಂತ ಅಪರಾಧಿಗಳಾಗಿಯೇ ಉಳಿಯಬೇಕಾಗುತ್ತದೆ, ಪದೇ ಪದೇ ಬಂದಿಖಾನೆಗಳಿಗೆ ಹೋಗಲೇಬೇಕಾಗುತ್ತದೆ. ಅಂಥ ಒಂದು ಒತ್ತಾಯದ ಪರಿಸ್ಥಿತಿ ಇವತ್ತು ಇದೆ. ಇದಕ್ಕೆ ತಮಗೆ ಒಂದು ಉದಾಹರಣೆಯನ್ನು ಕೊಡಬಹುದು. ಜೈಲಿನಿಂದ ಹೊರಗೆ ಬಂದ ಮೇಲೆ ಅವರಿಗೆ ಸಂರಕ್ಷಣೆ ಮಾಡುವುದಕ್ಕೆ ಅವರಿಗೆ ಉದ್ಯೋಗವನ್ನು ಒದಗಿಸಿಕೊಡುವುದಕ್ಕೆ, ಒಂದು ಎಕ್ಸ್‌ಛೇಂಜಿನಲ್ಲಿ ಹೋಗಿ ಅವರ ಹೆಸರನ್ನು ನೋಂದಣಿಸಿ ಅವರಿಗೆ ಕೆಲಸಗಳನ್ನು ಕೊಡಬೇಕೆಂದು ಇದೆ. ಆದರೆ ಜೈಲಿನಲ್ಲಿರತಕ್ಕ ಲಯಸಾನ್ ಆಫೀಸರು ಅಥವಾ ವೆಲ್‌ಫೇರ್ ಆಫೀಸರು ಇದುವರೆಗೂ ಎಷ್ಟು ಜನರಿಗೆ ಜೀವನೋಪಾಯಕ್ಕೆ ಅವಕಾಶಮಾಡಿಕೊಟ್ಟಿದ್ದಾರೆ ಎನ್ನುವುದನ್ನು ನೋಡಿದರೆ ಅದು ತೃಪ್ತಿಕರವಾಗಿಲ್ಲ. ನಾವು ಈ ಒಂದು ವಿಷಯದ ಬಗ್ಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಏನೆಂದರೆ ಒಬ್ಬ ಮನುಷ್ಯ ಅಪಾದನೆಯ ಒತ್ತಡದಿಂದಲೋ ಅಥವಾ ಯಾರಾದರೂ ದುರ್ಮಾರ್ಗಿಗಳ ಸಹವಾಸದಿಂದಲೋ ಒಮ್ಮೆ ತುತ್ತಾಗಿ ಶಿಕ್ಷೆಗೆ ಗುರಿಯಾದ ಎಂದರೆ ಅವನ ಜೀವನವೆಲ್ಲ ಅಪರಾಧಿಯಾಗಿ ಸೆರೆಮನೆಗೆ ಪದೇ ಪದೇ ಹೋಗತಕ್ಕವನು ಏಕೆ ಆಗುತ್ತಾನೆ ಎನ್ನುವ ಬಗ್ಗೆ ಸರ್ಕಾರದವರು ಮತ್ತು ಸಮಾಜ ಕೂಡ ವಿಚಾರ ಮಾಡಬೇಕಾಗುತ್ತದೆ.

ಈಗ ಹೊಸದಾಗಿ ಸುಧಾರಣೆ ತರುವ ವಿಷಯದಲ್ಲಿ ಸರಕಾರ ಅಲ್ಲಲ್ಲಿ ಆರಂಭ ಮಾಡಿದ್ದಾರೆ. ಭಿಕ್ಷುಕರನ್ನು ತಡೆಗಟ್ಟಲು ಒಂದು ಕಾಲನಿ ಇದೆ. ಭಿಕ್ಷೆ ಬೇಡಬಾರದು. ಅವರು ಈ ಕಾಲನಿಯಲ್ಲಿ ಇರಬೇಕು ಎಂದು ದೊಡ್ಡದೊಡ್ಡ ಜನ ಸೆಕ್ರೆಟರಿ, ಚೇರಮನ್ ಮಾಡಿ ಒಂದು ಕ್ರಮ ತೆಗೆದುಕೊಂಡಿದ್ದಾರೆ. ಭಿಕ್ಷುಕರ ಕಾಲನಿ ಇರುವ ರೀತಿಯಲ್ಲಿ ಕನ್‌ವಿಕ್ಟ್‌ಗಳು ಶಿಕ್ಷೆ ಅನುಭವಿಸಿ ಹೋದಮೇಲೆ ಅವರಿಗಾಗಿ ವ್ಯವಸ್ಥೆ ಮಾಡಿದ್ದಾರೆ. ಅಂಥವರಿಗೆ ಕೆಲಸ ಒದಗಿಸುವ ವಿಷಯದಲ್ಲಿ ಆಸಕ್ತಿ ಇಲ್ಲ. ನನಗೆ ಗೊತ್ತಿರುವ ಹಾಗೆ ಮೈಸೂರಿನಲ್ಲಿ ಸರ್ಟಿಫೈಡ್ ಸ್ಕೂಲ್ಸ್, ಡಿಸ್ಟ್ರಿಕ್ಟ್ ಶೆಲ್ಟರ್ ಹೋಮ್ಸ್ ಎಂದಿವೆ. ಮೂರು ತಿಂಗಳು ಕಾಲ ಅಲ್ಲಿ ಇರಬೇಕು ಎಂದಿದೆ ಎಂದು ಕೇಳಿದ್ದೇನೆ. ಸಮಾಜದಲ್ಲಿ ಮನುಷ್ಯ ನೈತಿಕವಾಗಿ ಕೆಟ್ಟವನಿಗೆ ಪುರಸ್ಕಾರ ದೊರೆಯುವುದಿಲ್ಲ. ಪಶ್ಚಾತ್ತಾಪ ಪಟ್ಟು ತಪ್ಪನ್ನು ಸುಧಾರಿಸಿಕೊಂಡು ಜೀವನ ನಡೆಸಿಕೊಂಡು ಹೋಗಲು ಪ್ರಯತ್ನಪಟ್ಟರೂ ಅವನಿಗೆ ಸರಕಾರ ಉದ್ಯೋಗ ಒದಗಿಸಿಕೊಡುವ ಸ್ಥಿತಿಯಲ್ಲಿಲ್ಲ. ಒದಗಿಸಿ ಕೊಟ್ಟಿಲ್ಲ. ಈ ವ್ಯವಸ್ಥೆ ಬಗ್ಗೆ ಮನಮುಟ್ಟಿ ಪ್ರಯತ್ನಪಟ್ಟರೆ ಬಹಳ ಜನ ಒಮ್ಮೆ ಜೈಲಿಗೆ ಹೋದವರು ಪುನಃ ಹೋಗದಂತೆ ಅವಕಾಶ ಮಾಡಿಕೊಡಬಹುದು. ನಾಗರೀಕರಾಗಿ ಬಾಳುವಂತೆ ಮಾಡಬಹುದು. ಪ್ರಚಾರ ಮಾಡಿದಂತೆ ನಿಜವಾಗಿಯೂ ಅವರಿಗೆ ಆಶ್ರಯ ಒಂದು ನೆರೆ ಕೊಡುತ್ತಾ ಇಲ್ಲ. ಇದನ್ನು ಮಾನ್ಯ ಸಚಿವರು ದಯವಿಟ್ಟು ಗಮನಿಸಿ ಈ ರಾಜ್ಯದಲ್ಲಿ ಉದ್ಯೋಗ ಕಲ್ಪಿಸಿಕೊಟ್ಟಿದ್ದಾರೆಯೆ ಪರಿಶೀಲನೆ ಮಾಡಬೇಕು. ಮತ್ತು ಇದಕ್ಕೆ ಪರಿಹಾರ ಒದಗಿಸಿಕೊಡಬೇಕು. ನಡೆಸತಕ್ಕಂಥ ರಿಮಾಂಡ್ ಹೋಮ್, ಸರ್ಟಿಫೈಡ್ ಸ್ಕೂಲ್ಸ್, ಡಿಸ್ಟ್ರಿಕ್ಟ್ ಶೆಲ್ಟರ್ಸ್ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಲಿಕ್ಕೆ ವೆಲ್‌ಫೇರ್ ಆಫೀಸರ್ಸ್ ಲೇಜನ್ ಆಫೀಸರ್ಸ್ ಅಲ್ಲಲ್ಲಿ ಇಟ್ಟಿದ್ದಾರೆ. ಅವರು ಯಾವರೀತಿ ಕೆಲಸ ಮಾಡುತ್ತಾರೆ ಎಂಬ ವಿಷಯದ ಕಡೆಗೆ ಗಮನ ಕೊಡಬೇಕು ಎಂದು ಸಚಿವರನ್ನು ಕೇಳಿಕೊಳ್ಳುತ್ತೇನೆ ಈ ಸಂದರ್ಭದಲ್ಲಿ.

ಇನ್ನು ಜೀವಾವಧಿ ಶಿಕ್ಷೆ ಅಂದರೆ ಬಹುಶಃ 20 ವರ್ಷ ಎಂದು ಕಾಣುತ್ತದೆ. ಜೀವಾವಧಿ ಶಿಕ್ಷೆ ಸಾಮಾನ್ಯವಾಗಿ ಕೊಲೆ ಅಪಾದನೆ, ಮರಣದಂಡನೆಗೆ ಬದಲು ವಿಧಿಸುತ್ತಾರೆ. ಹಿಂದಕ್ಕೆ ಮಹಾರಾಜರ ವರ್ಧಂತಿ ಸಮಯದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುವವರ ಬಿಡುಗಡೆಯಾಗುತ್ತಿತ್ತು. ಶಿಕ್ಷೆಗೆ ರೆಮಿಷನ್ ಸಿಕ್ಕದೆ ಹೋದರೆ ಜೈಲ್ ಹೊರಗೆ ಬರತಕ್ಕಂಥ ಆಸೆ ಮಂಕಾಗುತ್ತದೆ.

ಶ್ರೀ ಆರ್. ಎಂ. ಪಾಟೀಲ್.—ರೆಮಿಶನ್ ಸಿಕ್ಕುತ್ತದೆ. ಬಹಳ ಉದಾರವಾಗಿ ಕೊಡಲಾಗುತ್ತದೆ, ಆದರೆ, ಅದು ಎಷ್ಟು ವರ್ಷ ಎಂಬುದು ಜೈಲಿನಲ್ಲಿ ಅಪರಾಧಿಯ ಕಾಂಡಕ್ಟ್ ಮೇಲೆ ಅವಲಂಬಿಸಿರುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಸಾಧ್ಯವಾದ ಮಟ್ಟಿಗೂ ಇಂಥವುಗಳನ್ನು ರೆವ್ಯೂ ಮಾಡಬೇಕು, ಇದು ಕಾನೂನಿನಲ್ಲಿದೆ. ಆದರೆ ಇದಕ್ಕೆ ಗಮನ ಇರುವುದಿಲ್ಲ. ಆದಷ್ಟು ಬೇಗಬೇಗ ಪರಿಶೀಲನೆ ಮಾಡತಕ್ಕದು ಉಚಿತ. ಉತ್ತಮ ನಡತೆಯವರು ಆಗಿದ್ದಾರೆಯೇ ಮಾನಸಿಕ ಪರಿವರ್ತನೆಯಾಗಿದೆಯೇ ಎನ್ನುವುದನ್ನು ಡಾಕ್ಟರರು ಪರೀಕ್ಷೆ ಮಾಡಬೇಕಾಗುತ್ತದೆ. ಅವರು ಅಪರಾಧ ಮಾಡಿದ ಸ್ಥಳದಲ್ಲಿ ಪರಿಸ್ಥಿತಿ ತಿಳಿಯಾಗಿದೆಯೇ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬಹುದು. ಹಿಂದಕ್ಕೆ ಕಾನೂನು ಪ್ರಕಾರ ರೆಮಿಶನ್ ಕೊಡುತ್ತಿದ್ದರು. ಜೇಲರನ ಅಚ್ಚುಮೆಚ್ಚಿನ ಜನರಿಗೆ ಅದು ದೊರೆಯುತ್ತದೆ. ಆದರೆ ಒಳ್ಳೇ ಕಾಂಡಕ್ಟ್ ಇದ್ದವರಿಗೆ ದೊರೆಯಬೇಕು. ಅವರ ನಡತೆ ನೋಡುವವರು ಯಾರು ? ತಿಳುವಳಿಕೆ ಕೊಡತಕ್ಕಂಥವರು ಯಾರು ? ನೋಡುವ ಕಣ್ಣು ಯಾವುದು ? ಮಂತ್ರಿಗಳು ನೋಡುತ್ತಾರೆಯೇ ? ಜೈಲಿನಲ್ಲಿ ಎಲ್ಲವೂ ಯಾಂತ್ರಿಕವಾಗಿ ನಡೆಯುತ್ತಿದೆ. ಪುಸ್ತಕದಲ್ಲಿ ಕೆಲವು ಕಾಲಂಗಳು ಇರುತ್ತವೆ. ಒಳ್ಳೇ ಮನಸ್ಸು ಇದ್ದರೆ ಕಾಲಂ ಭರ್ತಿ ಮಾಡುವುದು, ಮನಸ್ಸು ಬಂದರೆ ಕೊಡುವುದು ಇಲ್ಲದಿದ್ದರೆ ಇಲ್ಲ ಎಂದು ಹೇಳುವುದು ನಡೆದಿದೆ. ಇದು ಅರ್ಬಿಟ್ರರಿಯಾಗಿದೆ. ಸಾಮಾನ್ಯವಾಗಿ ಇಂಥವರು ಜೈಲಿನಲ್ಲಿ 15–20 ವರ್ಷ ಇರುವುದರಿಂದ ಯಾವುದಾದರೂ ಒಂದು ಉದ್ಯೋಗದಲ್ಲಿ ನೇಮಿಸಿರುತ್ತಾರೆ. ಸಾಮಾನ್ಯವಾಗಿ ಜೈಲಿನ ಎಲ್ಲ ವಿಷಯಗಳೂ ಅವರಿಗೆ ಗೊತ್ತಿರುತ್ತವೆ. ಜೇಲರ್ ಸೂಪರಿಂಟೆಂಡೆಂಟ್ ಇವರು ಅವರ ಮರ್ಜಿಯಲ್ಲಿರಬೇಕಾಗುತ್ತದೆ. ಅವರು ಮನಸ್ಸು ಮಾಡಿದರೆ ಜೈಲು ಖಾಲಿ ಮಾಡಿಬಿಡಬಹುದು. ಅಷ್ಟು ದಕ್ಷರಾಗಿರುತ್ತಾರೆ. ಅವರು ಶಿಕ್ಷೆಯ ಅವಧಿಯಲ್ಲಿ ಐದಾರು ಜೇಲರ್‌ಗಳನ್ನೂ ಎಂಟು ಹತ್ತು ಸೂಪರಿಂಟೆಂಡೆಂಟರನ್ನೂ ನೋಡಿರುತ್ತಾರೆ. ಅವರು ಪ್ರಭಾವಶಾಲಿಗಳಾಗಿ ಜೈಲು ವಹಿವಾಟ ಕೈಯಲ್ಲಿ ಇಟ್ಟುಕೊಂಡಿರುತ್ತಾರೆ. ಅಂಥವರ ಬಗ್ಗೆ ಪದೇಪದೇ ಪರಿಶೀಲನೆಯಾಗಬೇಕು. ಏನಾದರೂ ಹಿಂಸಾತ್ಮಕ ಕೆಲಸ ಮಾಡಿದ್ದಾರೆಯೇ ತೊಂದರೆ ಕೊಟ್ಟಿದ್ದಾರೆಯೇ ಜೊತೆ ಇರುವ ಕೈದಿಗಳಿಗೆ ಎಂಬುದನ್ನು ಪರಿಶೀಲನೆ ಮಾಡಿ ಒಂದು ತೀರ್ಮಾನ ಕೊಡುತ್ತಾ ಒಂದು ರಿಕಾರ್ಡ್ ಬರೆದು ಇಡಬೇಕು. ಹೀಗೆ ಮಾಡುವುದರಿಂದ ಚಿಕ್ಕ ವಯಸ್ಸಿನಲ್ಲಿ ಕೆಲವು ಕಾರಣಗಳಿಂದ ಶಿಕ್ಷೆಗೆ ಗುರಿಯಾಗಿದ್ದಂಥವರ ಬಗ್ಗೆ ಈ ವಿಧಾನ ಅನ್ವಯಿಸಿದರೆ ಅವರ ಜೀವಾವಧಿ ಶಿಕ್ಷೆ ಎಂಟು ಹತ್ತು ವರ್ಷ ಕಡಿಮೆಯಾಗಿ ಶಿಕ್ಷೆ ಮುಂಚಿತವಾಗಿ ಮುಗಿಯಬಹುದು. ತೀವ್ರ ಪರಿಶೀಲನೆ ಮಾಡಿದರೆ ಅವರ ಶಿಕ್ಷೆ ಮಾಫಿ ಕೂಡ ಮಾಡಿಸಬಹುದು. ಇಂಥ ಸುಧಾರಣೆ ಜಾರಿಗೆ ತರಲು ಪ್ರಯತ್ನ ಮಾಡಬೇಕು. ಬೆಂಗಳೂರು ಜೈಲಿನಲ್ಲಿ ಇಂಥ ಎಷ್ಟೋ ಕೇಸಸ್ ಇವೆ. ಅವರು ಹೊರಗೆ ಬರಲು ಆಶೆ ಪಡುತ್ತಾರೆ. ಹೊರಗಡೆ ಮಾಡಿದ ತಪ್ಪಿಗಾಗಿ ಶಿಕ್ಷೆಗೆ ಗುರಿಯಾಗುತ್ತಾರೆ. ಆ ವಿಷಯವಲ್ಲ.

ಅಂತಹ ಕೆಲವು ಸನ್ನಿವೇಶಗಳು ಇರುತ್ತವೆ, ಇದನ್ನು ಪರಿಶೀಲನೆ ಮಾಡಿ ಮಾನ್ಯ ಸಚಿವರು, ಈಗ ಅವರ ಮುಂದೆ ಇರತಕ್ಕ ಪರಿಶೀಲನೆ ಮಾಡುವ ಕೇಸುಗಳು, ಅವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಎಷ್ಟು ಬಂದಿವೆ, ಅದನ್ನಾದರೂ ಮಾಡಿದರೆ ಒಂದು ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸುಧಾರಣೆಯ ವಿಷಯ. ಖೈದಿಗಳನ್ನು ಹೇಗೆ ನಡೆಸಿಕೊಳ್ಳಬೇಕೆನ್ನುವ ಬಗ್ಗೆ ಈ ಮಸೂದೆಯಲ್ಲಿ ಯಾವ ಒಂದು ಆಶ್ವಾಸನೆಯನ್ನೂ ಮಾನ್ಯ ಸಚಿವರು ಕೊಟ್ಟಿಲ್ಲ. ಮತ್ತು ಈ ಮಸೂದೆಯಲ್ಲಿ ಒಂದು ವಿಷಯ ನೋಡಿದೆ ; ಅದೇನೆಂದರೆ ಪ್ರಿಸನರ್ಸ್ ಎನ್ನುವುದಕ್ಕೆ ಡೆಫನಿಷನ್ ಇದರಲ್ಲಿ ಇಲ್ಲ ; ಇದರಲ್ಲಿ ಪ್ರಿಸನ್ ಎನ್ನುವ ಡೆಫನಿಷನ್ ಇದೆ, ಖೈದಿಗಳ ವಿಷಯದಲ್ಲಿ ರಾಜಕೀಯ ಖೈದಿಗಳು ಇರುತ್ತಾರೆ, ಅವರನ್ನು ಹೇಗೆ ನೋಡಿಕೊಳ್ಳಬೇಕೆಂದು ಇದೆ—ಖೈದಿಗಳನ್ನು ಆಸ್ಪತ್ರೆಗೆ ಟ್ರೀಟ್‌ಮೆಂಟಗಾಗಿ ಕಳುಹಿಸಿದಾಗ ಅವರನ್ನು ಪ್ರತ್ಯೇಕವಾಗಿಡುವುದಕ್ಕೆ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಇರಬೇಕಾದ್ದು ಬಹಳ ಅಗತ್ಯವಾಗುತ್ತದೆ. ಬೇರೆ ಖಾಯಿಲೆಯವರ ಜೊತೆಯಲ್ಲಿ ಅವರನ್ನು ತಂದಿಡುತ್ತಾರೆ. ಅವರ ಹಿಂದೆ ಎರಡು ಜನ ಪೋಲೀಸಿನವರು ಇರುತ್ತಾರೆ. ಆದರೂ ಕೂಡ ಕೆಲವು ಸಲ ತಪ್ಪಿಸಿಕೊಂಡು ಹೋಗುತ್ತಾರೆ. ಅದಕ್ಕೋಸ್ಕರ ಅವರ ಕೈ ಕಾಲುಗಳಿಗೆ ಕಬ್ಬಿಣದ ಸರಳುಗಳನ್ನು ಕಟ್ಟಿ ಹಾಕಬೇಕಾಗುತ್ತದೆ ಆ ಅಭ್ಯಾಸ ನಡೆದಿದೆ. ಇದು ಅಲ್ಲಿರತಕ್ಕ ಬೇರೆ ರೋಗಿಗಳ ಮೇಲೆ ದುಷ್‌ಪರಿಣಾಮವನ್ನುಂಟುಮಾಡುತ್ತದೆ ಮತ್ತು ಖೈದಿಯ ಮೇಲೂ ಕೂಡ ಕೆಟ್ಟ ಪರಿಣಾಮವನ್ನುಂಟುಮಾಡುತ್ತದೆ. ಅದಕ್ಕೇ ಪ್ರತ್ಯೇಕವಾದ ಸ್ಥಳ ಇದ್ದರೆ ಒಳ್ಳೆಯದು. ಬೆಂಗಳೂರಿನಂತಹ ಕಡೆ ಹತ್ತಾರು ಖೈದಿಗಳನ್ನು ಕಳುಹಿಸುತ್ತಾರೆ, ಅವರಿಗೆ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಿ ಇತರ ರೋಗಿಗಳಿಂದ ಅವರನ್ನು ಬೇರ್ಪಡಿಸಿ ಅಲ್ಲಿ ಪೋಲೀಸ್‌ನವರನ್ನು ಇಟ್ಟು ನೋಡಿಕೊಳ್ಳಬೇಕಾದ್ದು ಅಗತ್ಯ—ಅದನ್ನು ಈ ಮಸೂದೆಯಲ್ಲಿ ಅಡಕ ಮಾಡುವುದಕ್ಕೆ ಬರುತ್ತದೆಯೇ ಸ್ವಾಮಿ ?

Sri R. M. PATIL.—That cannot be embodied in the Act, but, there is no difficulty to do that.

ಶ್ರೀ ಎಸ್. ಗೋಪಾಲ ಗೌಡ.—ಖೈದಿಗಳನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ಕಳುಹಿಸುವುದಕ್ಕೆ ಭತ್ಯ 6 ಆಣೆ ಕೊಡುತ್ತಾ ಇದ್ದಾರೆ, ಹಿಂದೆ ಯಾವುದೋ ಕಾಲದಲ್ಲಿ ಜೈಲು ಮ್ಯಾನ್ಯುಯಲ್ ಮಾಡಲ್ಪಟ್ಟಿದೆ; ಆ ಕಾಲದಲ್ಲಿ ಒಂದು ರೂಪಾಯಿಗೆ 16 ಸೇರು ಅಕ್ಕಿ 10 ಸೇರು ಬೇಳೆ ಸಿಕ್ಕುತ್ತಾ ಇತ್ತು, ಅದನ್ನೇ ಇವತ್ತೂ ಕೂಡ ಮುಂದುವರಿಸಿಕೊಂಡು ಹೋಗಿ ಸ್ವಲ್ಪ ಹೆಚ್ಚುಕಡಿಮೆ ಮಾಡುವುದರಲ್ಲಿ ಸರ್ಕಾರದವರು ತೃಪ್ತರಾಗಿದ್ದಾರೆ, ಈ ದಿವಸ ಹೊರಗಡೆ ಏನು ಬೆಲೆ ಇದೆ ಆ ಬೆಲೆಗೂ ಸರ್ಕಾರದ ಬೆಲೆಗೂ ಏನೂ ಸಂಬಂಧಗಳೇ ಇಲ್ಲ. ಅದನ್ನು ತಾವು ಈ ರೂಲ್ಸ್ ಮಾಡುವಾಗ ಮ್ಯಾನ್ಯುಯಲ್‌ನ್ನು ದೃಷ್ಟಿಯಲ್ಲಿಟ್ಟುಕೊಂಡು ಸೂಕ್ತವಾದ ತಿದ್ದುಪಡಿ ಮಾಡುವುದು ಬಹಳ ಅಗತ್ಯವಾಗಿದೆ. ಹಿಂದೆ ಆದ ಯಾವುದೋ ಪ್ರಕರಣಗಳನ್ನು ಇವತ್ತೂ ಕೂಡ ಇಟ್ಟುಕೊಂಡಿರುವುದರಿಂದ ಈ ಜೈಲಿನಲ್ಲಿ ಯಾವುದೇ ತರಹದ ಸುಧಾರಣೆಯನ್ನೂ ತರುವುದಕ್ಕೆ ಆಗುತ್ತಿಲ್ಲ. ಖೈದಿಗಳನ್ನು ಕಳುಹಿಸುವಾಗ, ಅವರ ಜೊತೆಯಲ್ಲಿ ಪೋಲೀಸಿನವರನ್ನು ಕಳುಹಿಸುವಾಗ ಅವರಿಗೆ ಕೊಡುವ ಭತ್ಯ ಮತ್ತು ಅವರ ನಿರ್ವಹಣೆ ಖರ್ಚು ಬಹಳ ಕಡಿಮೆಯಾಗಿದೆ. ಅದನ್ನುಕೂಡ ಇವತ್ತು ನೀವು ಇವತ್ತಿನ ಪೇಟೆ ಧಾರಣೆ ಏನಿದೆ ಅದರಂತೆ ಕೊಡಬೇಕು. ಹೊಸದಾಗಿ ರೂಲ್ಸ್‌ನ್ನು ಮಾಡುವಾಗ ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಜೀವಾವಧಿ ಶಿಕ್ಷೆಯಾದವರಿಗೆ, ಮರಣ ದಂಡನೆ ಶಿಕ್ಷೆಯಾದವರಿಗೆ—

"The High Court may, in any case in which it has recommended to the State Government, granting of a free pardon to any prisoner, permit him to be at liberty on his own recognizance."

ಎಂದು ಹೇಳಿ ಇದರಲ್ಲಿ ಇದೆ. ಇದು ಒಂದು ರೀತಿಯಲ್ಲಿ ಸುಧಾರಣೆ, ಇದರಿಂದ ಅನುಕೂಲವಾಗುತ್ತದೆ ಎಂದರೂ ಕೂಡ ಇದು ಬಹಳ ಸಲ ಕಾರ್ಯಗತವಾದಂತೆ ಕಂಡುಬರುವುದಿಲ್ಲ. ಆದ್ದರಿಂದ ಒಟ್ಟಿನಲ್ಲಿ ನಾನು ಹೇಳುವುದೇನೆಂದರೆ ರಾಮನಗರದ ಸದಸ್ಯರು ಹೇಳುವಂತಹ ರೀತಿಯಲ್ಲಿ ಜೈಲುಗಳನ್ನು ಮಾಡಿದ ಮಾತ್ರಕ್ಕೆ, ಹೊರಗಡೆ ಸಮಾಜ ಸುಧಾರಣೆ ಆಗದೆ, ಸಮಾಜದಲ್ಲಿ ಎಲ್ಲರಿಗೂ ಗೌರವಯುತವಾಗಿ ಕೆಲಸ ಮಾಡಿ ಜೀವಿಸಿರುವುದಕ್ಕೆ ಅವಕಾಶ ಮಾಡಿಕೊಡದೇ ಬಂದೀಖಾನೆಗಳನ್ನು ಮತ್ತು ಶಿಕ್ಷೆಗಳನ್ನು ಉಗ್ರಪಡಿಸುತ್ತಾ ಹೋದ ಮಾತ್ರಕ್ಕೆ ತಕ್ಸೀರು ಕಡಿಮೆಯಾಗಿ ಅವರ ಸಂಖ್ಯೆ ಕಡಿಮೆಯಾಗುತ್ತದೆ ಎಂದು ಭಾವಿಸುವುದು ಬಹಳ ತಪ್ಪಾಗುತ್ತದೆ ಮತ್ತು ಜೈಲಿನ ಒಳಗಡೆಯೂ ಸಹ ಅವರನ್ನು ಮನುಷ್ಯರಂತೆ ನೋಡಿಕೊಂಡು ಅವರ ಒಳ್ಳೆಯ ನಡತೆಗೆ ಶಿಕ್ಷೆಯನ್ನು ಕಡಿಮೆ ಮಾಡಿ ಅವರನ್ನು ಒಂದು ಮಾನವೀಯ ದೃಷ್ಟಿಯಿಂದ ನೋಡಿಕೊಂಡ ಮಾತ್ರಕ್ಕೆ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿದ ಮೇಲೆ ಪುನಃ ಅಲ್ಲಿಗೇ ಬರುತ್ತಾರೆ ಎಂದು ಹೇಳುವ ಮಾತಿನಲ್ಲಿ ಅರ್ಥವಿಲ್ಲ. ಜೈಲಿಗೆ ಹೋಗುವುದು ಎಂದರೆ ಅವಮಾನ. ತನ್ನ ಜೀವನದಲ್ಲಿ ಯಾವತ್ತೂ ಅಂತಹ ಸನ್ನಿವೇಶ ಬರದೇ ಇರಲಿ ಎಂದು ನಿತ್ಯ ಪ್ರಾರ್ಥನೆ ಕೂಡ ಮಾಡುತ್ತಾನೆ. ಜೈಲು ಚೆನ್ನಾಗಿದೆ ಎಂದು ಯಾರೂ ಕೂಡ ಊಟಕ್ಕೆ ಅಥವಾ ಜೀವನೋಪಾಯಕ್ಕೆ ಹೋಗುವುದಿಲ್ಲ. ಆ ರೀತಿ ಹೋಗುತ್ತಾರೆ ಎನ್ನುವುದು ಅರ್ಥವಿಲ್ಲದ ಮಾತು. ಈ ಎರಡು ಮಸೂದೆಗಳನ್ನೂ ಮಾನ್ಯ ಸಚಿವರು ಕಾನೂನು ಮಾಡುವವರು ಇದ್ದಾರೆ. ಅವರು ಈ ಕೆಲವು ಸುಧಾರಣೆಗಳನ್ನು ಜಾರಿಗೆ ತರುವ ವಿಷಯದಲ್ಲಿ ಅದಷ್ಟು ಬೇಗ ತಿದ್ದುಪಡಿ ರೂಪದಲ್ಲಿ ಆದರೂ ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಈ ರೂಲ್ಸ್‌ನ್ನು ಮಾಡುವಾಗ ದಯವಿಟ್ಟು ಅವರು ಈಗಿರುವ ಜೈಲುಗಳನ್ನೆಲ್ಲಾ ಒಂದು ಸಲ ಭೇಟಿ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಅವರೇ ಹೋಗಬೇಕೋ ಅಥವಾ ರಿಪೋರ್ಟ್ ತರಿಸಿದರೆ ಆಗುತ್ತದೆಯೋ!

ಶ್ರೀ ಎಸ್. ಗೋಪಾಲ ಗೌಡ.—ಭೇಟಿ ಎಂದರೆ ತಕ್ಸೀರು ಮಾಡಿ ಎಂದು ಅಲ್ಲ. ತಕ್ಸೀರು ಮಾಡಿ ನಾನೇ ಹೋಗಿಲ್ಲ ಪಾಪ, ಅವರು ಏಕೆ ಹೋಗಬೇಕು; ನಮ್ಮ ಸ್ನೇಹಿತರು ನೆನಪು ಮಾಡಿಕೊಟ್ಟರು. ಜೈಲುಗೋಡೆ ಎತ್ತರ ಆಗುತ್ತಾ ಇದೆ, ಇದು ಒಂದು ಸುಧಾರಣೆಯಾಗುತ್ತದೆಯೇ? ಕೆಲವು ಜೈಲುಗಳನ್ನು ತಾವು ನೋಡಬೇಕು ಬೆಂಗಳೂರು ಜೈಲು ಕಿರಿದ ಆಗುತ್ತಾ ಇದೆ—ಎಲ್ಲರೂ ಬಂದು ಅದನ್ನು ಆಕ್ರಮಿಸುತ್ತಾ ಇದ್ದಾರೆ—ಇದನ್ನು ಅಲ್ಲಿಂದ ತೆಗೆದು ಹೊರಗಡೆ ಹಾಕುವುದನ್ನು

(ಶ್ರೀ ಎಸ್. ಗೋಪಾಲಗೌಡ)

ಯೋಚನೆ ಮಾಡಬಹುದು. ರೇಸ್‌ಕೋರ್ಸ್ ಬೇರೆ—ಅದನ್ನು ಪರಿಶೀಲನೆ ಮಾಡಿ ಅದಕ್ಕೆ ಒಂದು ಒಳ್ಳೆಯ ಸ್ಥಳವನ್ನು ಅಥವಾ ವ್ಯವಸ್ಥೆಯನ್ನು ಮಾಡಬಹುದು. ಇನ್ನು ತಾವು ಬಳ್ಳಾರಿ ಮತ್ತು ಬೆಳಗಾಂ ಜೈಲುಗಳನ್ನು ನೋಡಬೇಕು. ಅಲ್ಲಿನ ಅವಶ್ಯಕತೆಗಳೇನು ವಿತರಣೆ ಹೇಗಿದೆ, ಕಟ್ಟಡ ಯಾವ ರೀತಿಯಲ್ಲಿ ಸುಧಾರಣೆಯಾಗಬೇಕು—ಏಕೆ ಹೇಳುತ್ತೇನೆಂದರೆ ಜೈಲು ಹತ್ತಿರ ಇದ್ದರೂ ಕೂಡ ಹೋಗಿ ನೋಡುವುದಕ್ಕೆ ಜನ ಹೆದರುತ್ತಾರೆ. ಹುಚ್ಚಾಸ್ಪತ್ರೆಗೆ ಹೋಗು ಎಂದರೆ ಹೋಗುವುದಿಲ್ಲ ನಮಗೇಕೆ ಎನ್ನುತ್ತಾರೆ ನಮ್ಮ ಸಮಾಜದಲ್ಲಿ ಅದೂ ಕೂಡ ಒಂದು ಅವಶ್ಯಕವಾದ ಅಂಗವಾಗಿದೆ. ಆದ್ದರಿಂದ ಅದೂ ಕೂಡ ಚೆನ್ನಾಗಿರಬೇಕು ; ಏನೋ ಕಾರಣಕ್ಕಾಗಿ ತಪ್ಪುಮಾಡಿ ಅಲ್ಲಿಗೆ ಹೋಗಿರುತ್ತಾರೆ—ಧರ್ಮರತ್ನಾಕರ ಗೋಪಾಲರಾಯರು ಇದ್ದರು. ಅವರನ್ನು ಮಾತನಾಡಿಸುವುದಕ್ಕೆ ದಿನವೂ ಹೋಗುತ್ತಾ ಇದ್ದೆ—

ಅದೇನೋ ಒಂದು ರೆಕ್ಕಾಚಾರದಲ್ಲಿ ತಪ್ಪಿ ಅವರು ಜೈಲಿಗೆ ಬರುತ್ತಾರೆ. ಅಂಥವರನ್ನು ನಾವು ಒಂದು ಮಾನವೀಯತೆಯ ದೃಷ್ಟಿಯಿಂದ ನೋಡಬೇಕು ಎಂದು ಹೇಳುತ್ತೇನೆ. ನಾನು ಒಂದಾವರ್ತಿ ಜೈಲಿಗೆ ಧರ್ಮರತ್ನಾಕರ ಅವರನ್ನು ನೋಡುವುದಕ್ಕೆ ಹೋಗಿದ್ದಾಗ ನನಗೆ ಅವರನ್ನು ಸಾಯಿಬಾಬಾ ನೋಡಿದಹಾಗೆ ಭಾಸವಾಗುತ್ತಿತ್ತು. ಆದರೆ ಜೈಲುಗಳಲ್ಲಿ ಬಚ್ಚಲು, ಗೋಡೆ ಇತ್ಯಾದಿಗಳನ್ನು ರಿಪೇರಿ ಮಾಡಬೇಕಾಗಿರುತ್ತದೆ. ಆ ವಿಷಯ ಅಲ್ಲಿರತಕ್ಕ ಅಧಿಕಾರಿಗಳಿಗೆ ಗೊತ್ತಿರುತ್ತದೆ. ಅಲ್ಲಿ ಒಂದು ಒಳ್ಳೇ ವಾತಾವರಣ ಇರಬೇಕಾದ್ದು ಅಗತ್ಯ. ಜೈಲಿನಲ್ಲಿರತಕ್ಕವರು ಹೊರಗೆ ಬರುವಾಗ ಮಾನಸಪರಿವರ್ತನೆ ಹೊಂದಿ ಹೊರಗೆ ಬರುವಂಥ ಒಂದು ಅವಕಾಶವನ್ನು ಕಲ್ಪಿಸಬೇಕೆಂದು ಹೇಳುತ್ತೇನೆ.

2-30 P.M.

ಇನ್ನು ಲೈಬ್ರರಿ ವಿಷಯದಲ್ಲಿ ಮೈಸೂರಲ್ಲಿರತಕ್ಕ ಜೈಲಿನಲ್ಲಿರುವ ಲೈಬ್ರರಿಯಲ್ಲಿ 117 ಪತ್ತೇದಾರಿ ಪುಸ್ತಕಗಳಿದ್ದುವೆಂದು ಕೇಳುತ್ತೇನೆ. ಆದರೆ ಆ ಪುಸ್ತಕಗಳಿಗೆ ಹಿಂದೆ ಮುಂದೆ ಏನೂ ಇರುವುದಿಲ್ಲ. ಎಲ್ಲಾ ಕಿತ್ತು ಹೋಗಿರುತ್ತದೆ. ಜೈಲುಗಳಿಗೆ ಒಳ್ಳೇ ವಿದ್ಯಾವಂತರುಗಳೂ ಬರುತ್ತಾರೆ. ಜೈಲಿಗೆ ಬರತಕ್ಕಂಥವರು ನಾನಾ ಕಾರಣಗಳಿಗಾಗಿ ಅಲ್ಲಿಗೆ ಬಂದಿರುತ್ತಾರೆ ; ಅಲ್ಲಿ ಅವರಿಗೆ ಒಳ್ಳೆಯ ಪುಸ್ತಕಗಳನ್ನು ಮತ್ತು ರೇಡಿಯೋ ಇತ್ಯಾದಿಗಳನ್ನೆಲ್ಲ ಒದಗಿಸುವುದಕ್ಕೆ ಅವಕಾಶ ಇದೆ. ಈಗ ನಾವು ಜೈಲುಗಳನ್ನು ಸುಧಾರಣೆ ಮಾಡಬೇಕೆಂಬ ತತ್ತ್ವವನ್ನು ಒಪ್ಪಿಕೊಂಡಿರುವಾಗ ಅಲ್ಲಿ ಒಳ್ಳೆಯ ಪುಸ್ತಕ ಇತ್ಯಾದಿ ಅನುಕೂಲತೆಗಳನ್ನು ಒದಗಿಸಲು ಒಪ್ಪಿಕೊಂಡಿರುವಾಗ, ಅಲ್ಲಿ ಅವರಿಗೆ ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ ಇಂಥ ಒಳ್ಳೊಳ್ಳೆ ದೇಶಭಕ್ತರ ಹಾಗೂ ವಿಜ್ಞಾನಿಗಳ ಒಳ್ಳೆಯ ಪುಸ್ತಕಗಳನ್ನಿಡಲು ಪ್ರಯತ್ನ ಮಾಡಬೇಕು. ಆದರೆ ಅಲ್ಲಿ ಬರಿ ಪತ್ತೇದಾರಿ ಕಾದಂಬರಿಗಳನ್ನಿಟ್ಟರೆ ಸಾಲದು. ಹಾಗೆಂದರೆ ನಾನು ಇವುಗಳನ್ನು ಜರೆಯುತ್ತಿದ್ದೇನೆಂದು ಯಾರೂ ಭಾವಿಸಬಾರದು. ನಾನು ಇವುಗಳನ್ನು ಅಲ್ಲಗಳೆಯುತ್ತಿಲ್ಲ. ಆದರೆ ನಾನು ಏನು ಹೇಳುತ್ತಿದ್ದೇನೆಂದರೆ ಅಲ್ಲಿಗೆ ಬರತಕ್ಕ ಖೈದಿಗಳ ಮನಸ್ಸು ಪರಿವರ್ತನೆ ಹೊಂದಲು, ಹಾಗೂ ಅವರ ನೈತಿಕಬಲವನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗತಕ್ಕಂಥ ಪುಸ್ತಕಗಳನ್ನು ಹೆಚ್ಚು ಹೆಚ್ಚಾಗಿಡಬೇಕೆಂದು ಹೇಳುತ್ತೇನೆ. ಅಷ್ಟೇ ಅಲ್ಲ ಬೇರೆ ಬೇರೆ ಭಾಷೆಗಳ ಪುಸ್ತಕಗಳನ್ನೂ ಕೂಡ ಇಡಬೇಕೆಂದು ಹೇಳುತ್ತೇನೆ. ಹೀಗೆ ಇನ್ನೂ ಅನೇಕ ಸೌಲತ್ತುಗಳನ್ನು ಒದಗಿಸಿ ಅವರ ಮನಸ್ಸಿನ ಒಂದು ದುಗುಡ ಹಾಗೂ ಬೇಸರ, ಇವುಗಳನ್ನು ಅವರ ಮಾನಸಿಕ ಬೆಳವಣಿಗೆಯನ್ನು ಹೆಚ್ಚಿಸಿಕೊಳ್ಳಲು ಅವಕಾಶವನ್ನುಂಟುಮಾಡುವ ದೃಷ್ಟಿಯಿಂದ ಅಲ್ಲಿ ಒಳ್ಳೆಯ ಪುಸ್ತಕಗಳನ್ನಿಡಬೇಕೆಂದು ಹೇಳುತ್ತೇನೆ.

ಇನ್ನು ಈ ಖೈದಿಗಳನ್ನು ಜೈಲಿನ ಅಧಿಕಾರಿಗಳು ಮನೆಯ ಕೆಲಸಕ್ಕೆ ಉಪಯೋಗಿಸತಕ್ಕ ಪದ್ಧತಿಯುಂಟು. ಇದಕ್ಕಾಗಿ ಕೆಲವರಿಗೆ ಒಂದುತಿಂಗಳಿಗೆ ಒಂದು ರೂಪಾಯಿ, ಕೆಲವರಿಗೆ ಎಂಟಾಣೆ, ಇನ್ನು ಕೆಲವರಿಗೆ ನಾಲ್ಕಾಣೆ ಹೀಗೆಲ್ಲ ಇದೆ ಎಂದು ಕೇಳುತ್ತೇನೆ. ಆದರೆ ಜೈಲಿಗೆ ಬರತಕ್ಕ ಕೆಲವರನ್ನು ಬಗ್ಗಿಸುವುದು ಬಹಳ ಕಷ್ಟ. ಅವರು ನಿಶ್ಚಯಿಸಿಕೊಂಡೇ ಅಲ್ಲಿಗೆ ಬಂದಿರುತ್ತಾರೆ. ಅಂಥವರ ವಿಷಯವನ್ನು ನಾನೀಗ ಹೇಳುತ್ತಿಲ್ಲ. ಆದರೆ ಹೀಗೆ ಕೆಲವರೇನು ಒಂದು ಸಂಪಾದನೆ ಮಾಡಿಕೊಂಡು ಹೊರಗೆ ಬರುತ್ತಾರೆ ಅವರು ಹಾಗೆ ಹೊರಗೆ ಬರುವಾಗ ಅದರಲ್ಲಿ 50 ರೂಪಾಯಿ ವರೆಗೆ ಇರುತ್ತೆಂದು ಕೇಳುತ್ತೇನೆ. ಈ ಹಣದಿಂದ ಆತ ಯಾವ ಕೈಗಾರಿಕೆಯನ್ನೂ ಕೈಗೊಳ್ಳಲು ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ಕೆಲವು ಖೈದಿಗಳನ್ನು ಆ ಊರಿನವರೂ, ಮತ್ತು ಆತನ ಸಂಬಂಧಿಗಳೂ ಸೇರಿಸಿಕೊಳ್ಳುವುದಕ್ಕೆ ಒಪ್ಪುವುದಿಲ್ಲ. ಅಂಥ ಸಂದರ್ಭಗಳಲ್ಲಿ ಈ ಖೈದಿಗಳನ್ನು

ತೆರೆಗೊಳಿಸಬೇಕಾದ್ದು ಸರ್ಕಾರದ ಕರ್ತವ್ಯ. ಜೈಲುಗಳಿದ್ದವರಲ್ಲಿ ಕೂಡ ಒಳ್ಳೇ ಕುಶಲ ಕೈಗಾರಿಕೆ ಕಲತಿದ್ದ ಖೈದಿಗಳಿದ್ದರೆಂದು ನಾನು ಕೇಳಿದ್ದೆ. ಆತನು ಒಳ್ಳೇ ಹಗ್ಗ, ನಾರಿನಲ್ಲಿ ಗಡಿಯಾರದ ಸರಪಣಿ ಇಂಥ ಒಳ್ಳೊಳ್ಳೇ ಸಾಮಾನುಗಳನ್ನು ಮಾಡುತ್ತಿದ್ದನೆಂದು ಕೇಳಿದ್ದೇನೆ. ಅಲ್ಲದೆ ಜೈಲಿನಲ್ಲಿ ತಯಾರಾದ ಉತ್ತಮವಸ್ತುಗಳು ಒಳ್ಳೇ ಬೆಲೆಗೆ ಮಾರಾಟವಾಗುತ್ತಿರುವುದನ್ನು ನಾವು ನೋಡಿದ್ದೇವೆ. ಇಂಥವರ ಅನುಕೂಲಕ್ಕಾಗಿ ಹೊರಗಡೆ ಒಂದು ಸೊಸೈಟಿಯನ್ನು ಸ್ಥಾಪಿಸಿ, ಯಾವುದಾದೂ ಉತ್ತಮ ಕೈಗಾರಿಕೆಯನ್ನು ತೆರೆದರೆ ಅದರಿಂದ ಇವರಿಗೆ ಬಹಳ ಅನುಕೂಲವಾಗುತ್ತದೆ.

ಇನ್ನು ಬಟ್ಟೇ ವಿಚಾರ: ಆರು ತಿಂಗಳಿಗಿಂತ ಕಡಮೆ ಶಿಕ್ಷೆ ಆದವರಿಗೆ ಹಳೇ ಬಟ್ಟೆಗಳನ್ನೇ ಕೊಡಬೇಕೆಂದು ನೇಮವಿದೆಯಂತೆ. ಆರು ತಿಂಗಳಿಗೆ ಮೇಲ್ಪಟ್ಟ ಶಿಕ್ಷೆ ಆದವರಿಗೆ ಹೊಸ ಬಟ್ಟೆಗಳನ್ನು ಕೊಡುತ್ತಾರಂತೆ. ಇವರಿಂದ ಒಂದು ಬಟ್ಟೆ ನೆಯ್ಯುವ ಕಾರ್ಖಾನೆಯನ್ನೇ ಸ್ಥಾಪಿಸಬಹುದು ಬಟ್ಟೇ ವಿಚಾರದಲ್ಲೂ ಇನ್ನು ಸ್ವಲ್ಪ ಸುಧಾರಣೆ ಆಗಬೇಕಾಗಿದೆ. ಆದರೆ ನಾನೀಗ ಮಾನ್ಯ ಗೃಹಸಚಿವರು ಹಾಕಿಕೊಂಡಿರುವಂಥ ರಾಂಗ್ ಕೊಟನ್ನೇ ಕೊಡಬೇಕೆಂದು ಕೇಳುವುದಿಲ್ಲ. ಅವರಿಗೆ ಕೊಡತಕ್ಕ ಬಟ್ಟೆಗಳು ಕೂರೆ ಇತ್ಯಾದಿಗಳಿಲ್ಲದೆ ಶುಚಿಯಾಗಿರಬೇಕು, ಮೈಮುಚ್ಚುವಷ್ಟಾದರೂ ಇರಲೆಂದು ಹೇಳುತ್ತೇನೆ. ಮಾನ್ಯ ಸಚಿವರು ಮಾತನಾಡುತ್ತ ಜೈಲಿನಲ್ಲಿರತಕ್ಕ ಖೈದಿಗಳು ನಾಟಕ ಆಡಿ ರಕ್ಷಣಾನಿಧಿಗೆ ಹಣ ಸಹಾಯಮಾಡಿದರೆಂದು ಹೇಳಿದರು. ಇದನ್ನು ಕೇಳಿ ಹೊರಗಡೆ ಇರತಕ್ಕ ಜನರೂ ಸಹಾ ಈಗ ಜೈಲು ಬಹಳ ಮಟ್ಟಿಗೆ ಸುಧಾರಣೆ ಆಗಿದೆ ಎಂದು ಆಡಿಕೊಳ್ಳುತ್ತಿದ್ದಾರೆ. ಅದಕ್ಕಾದರೂ ನಾವೀಗ ಅವರಿಗೆ ಈ ಸೌಕರ್ಯಗಳನ್ನೆಲ್ಲ ಒದಗಿಸಲೇ ಬೇಕು. ಅಂಥ ಒಂದು ಕಾಲ ಬೇಗಬರಲೆಂದು ನಾನು ಹಾರೈಸುತ್ತೇನೆ. ನಾನಾಗಲೇ ಹೇಳಿದಂತೆ ಈ ಜನರಿಗೆ ಜೈಲು ಒಳಗೂ ಹೊರಗೂ ಶಿಕ್ಷಣವನ್ನು ಅವರಿಗೆ ಕೊಡಬೇಕಾಗಿದೆ ಆದರೆ ನಾನು ಹೇಳತಕ್ಕದ್ದೆಲ್ಲ ಯಾವತ್ತೂ ಕೊಲೆ, ದರೋಡೆ ಮಾಡತಕ್ಕವರ ವಿಷಯ ಹೇಳುತ್ತಿಲ್ಲ. ಕೆಲವು ಚಿಕ್ಕ ಮಕ್ಕಳು ಕಾರಣಾಂತರದಿಂದ ಜೈಲಿಗೆ ಬರುತ್ತಾರೆ. ಅಂಥವರು ಜೈಲಿನಿಂದ ಹೊರಗೆ ಬಂದಮೇಲೆ ಒಳ್ಳೆ ರೀತಿಯಲ್ಲಿ ಬಾಳಲು ಒಂದು ಅವಕಾಶವಿರಬೇಕು ಎಂದು ಹೇಳುತ್ತಿದ್ದೇನೆ. ಪೋಲಿಸರು ಮತ್ತು ಖೈದಿಗಳೂ ಇಬ್ಬರೂ ಒಟ್ಟಾಗಿ ಕಳ್ಳನೊಡನಾಡೆ ಕಳ್ಳನೇ ಅಕ್ಕು ಸರ್ವಜ್ಞ ಎನ್ನುವಂತೆ ಕೆಲವು ಕಡೆ ಆಗಿರುವುದನ್ನು ನೀವು ಕೇಳಿರಬಹುದು. ಚಿಕ್ಕಮಗಳೂರು ಜೈಲಿನ ಸುದ್ದಿ ಕೇಳಿರಬಹುದು. ಅಲ್ಲಿದ್ದ ಜೈಲರು ಕೆಲವು ಬಹಳ ನಿಷ್ಣಾತ ಖೈದಿ ಜನರನ್ನು ಕದಿಯುವುದಕ್ಕಾಗಿ ರಾತ್ರಿ ವೇಳೆ ಅವರನ್ನು ಬಿಟ್ಟು ಬಿಟ್ಟು ಅವರು ಬೆಳಗಾಗುವುದರೊಳಗಾಗಿ ಜೈಲಿನೊಳಗೆ ಖೈದಿಗಳಾಗಿ ಕುಳಿತಿರುತ್ತಿದ್ದರು. ಹೀಗೆ ಸಮಾಜದಲ್ಲಿ ಆಗುತ್ತಿದೆ, ಬೇಲಿಯೇ ಹೊಲ ಮೇಯುತ್ತದೆ ಎಂದು ಹಿಂದೆ ನಾವು ಹೇಳುತ್ತಿದ್ದೆವು. ಹಾಗೆ ತಮ್ಮ ಪೋಲೀಸು ಇಲಾಖೆಯಲ್ಲಿ ವಿಶೇಷವಾಗಿ ಖೈದಿಗಳಾಗಿರುವವರ ನೈತಿಕ ದೃಷ್ಟಿ ಕೋನವನ್ನೂ ಬದಲಾವಣೆಯನ್ನೂ ಮಾಡಬೇಕು. ಉದಾಹರಣೆಯಾಗಿ ಹೇಳುವುದಾದರೆ, ಒಬ್ಬ ಒಂದು ಸಾರಿ ಜೈಲಿಗೆ ಹೋಗಿ ಬಂದು ಬಿಟ್ಟರೆ ಸಾಕು, ಅವನು ಕೇಡಿಗಳ ಲಿಸ್ಟಿಗೆ ದಾಖಲು ಆಗಿಬಿಡುತ್ತಾನೆ. ಅಂತಹವನು ಎಲ್ಲಿಯೇ ಹೋಗುತ್ತಿರಲಿ ಅವನನ್ನು ಕೇಡಿ ಎಂತಲೇ ನೋಡುತ್ತಿರುತ್ತಾರೆ. ಹೋಟಲಿನೊಳಗೆ ಕಾಫಿ ಕುಡಿಯುವುದಕ್ಕೆ ಹೋದರೆ ಅಲ್ಲಿಯೂ ಕೂಡ ಪೋಲಿಸಿನವರು ಎಲ್ಲಿಗೆ ಹೋಗಿದ್ದೇ ಎಂದು ಕೇಳುತ್ತಾರೆ. ಪೋಲೀಸಿನವರಿಗೆ ಇಂತಹ ಜನರ ಮೇಲೆಯೇ ಯಾವಾಗಲೂ ಅವರ ದೃಷ್ಟಿ ಇರುತ್ತದೆ. ಇಂತಹವರ ಒಂದು ಲಿಸ್ಟನ್ನು ತುಂಬಿಸಿ ತಮಗೆ ಕಳುಹಿಸಿರುತ್ತಾರೆ. ತಾವೂ ಕೂಡ ನೋಡಿರಬಹುದು ಪ್ರತಿಯೊಂದು ಪೋಲೀಸು ಸ್ಟೇಷನ್ನಿನಲ್ಲಿಯೂ ಒಂದು ತಕ್ಸೀರು ಲಿಸ್ಟು ಎಂದು ಮಾಡಿರುತ್ತಾರೆ. ಅದರಲ್ಲಿ ಹೇಗಿದೆ ಎಂದರೆ ಒಂದು ತಿಂಗಳಲ್ಲಿ 1-00 ಎಂದಿದ್ದದ್ದು ಇನ್ನೊಂದು ತಿಂಗಳಿನಲ್ಲಿ 1-2 ಮತ್ತು ಇನ್ನೊಂದರಲ್ಲಿ 1-3, ಹೀಗೆ ಕ್ರಮವಾಗಿ ಮಾಡಿರುತ್ತೇವೆ ಎಂದು ತಾವು ಇಲ್ಲಿ ಹೇಳಿ ಅವರ ದಕ್ಷತೆ ಹೆಚ್ಚಾಗಿವೆ ಎನ್ನುವುದನ್ನು ತೋರಿಸುತ್ತದೆ ಎಂದರೆ ದಕ್ಷತೆ ತೋರಿದಂತಾಗುವುದಿಲ್ಲ ಮತ್ತು ಇದು ಪ್ರಮಾಣವೂ ಆಗುವುದಿಲ್ಲ. ಕೆಲವು ತಕ್ಸೀರುಗಳನ್ನಾದರೂ ಕಡಿಮೆ ಮಾಡಬೇಕು. ನೂರರಷ್ಟು ಕೊಲೆಯಾಗಿರುವುದರಲ್ಲಿ ಸುಮಾರು 60 ರಷ್ಟು ಹಿಡಿದೆವು ಎಂದು ಹೇಳಿದರೆ ಅದು ದಕ್ಷತೆ ತೋರಿದಂತಾಗುವುದಿಲ್ಲ. ನೂರು ಕೊಲೆಗಳಲ್ಲಿ ನೂರನ್ನೂ ಪೂರ್ತಿಯಾಗಿ ಹಿಡಿದು ಅದರಲ್ಲಿ ಎಲ್ಲರಿಗೂ ಶಿಕ್ಷೆಯಾಗದಿದ್ದರೂ ಕೊನೆಗೆ ಹತ್ತು ಜನಕ್ಕಾದರೂ ಶಿಕ್ಷೆಯಾಗಲೇ ಬೇಕು ಹಾಗಿಲ್ಲದೆ ನೂರು ಕೊಲೆಯಾದವುಗಳಲ್ಲಿ 60 ಕೊಲೆಯಾದವು ಎಂದು ಹೇಳಿದರೆ ಅದು ದಕ್ಷತೆ ತೋರಿದಂತಾಗುವುದಿಲ್ಲ. ಕೊಲೆ ಮಾಡಿ ಯಾರೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೊಲೆ ಮಾಡಿದವನು ಗಲ್ಲಿಗೆ ಹೋಗುತ್ತಾನೆ ಎನ್ನುವುದು ಎರಡನೇ ಪ್ರಶ್ನೆ. ಮಾನ್ಯ ಪಾಟೀಲರ ಪೋಲೀಸು ಇಲಾಖೆಯಲ್ಲಿ ಜನಕ್ಕೆ ಭಯ ಹೆಚ್ಚುವಂತೆ ಇರಬೇಕು. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಪಾಟೀಲರವರು ಜೈಲಿಗೆ ಸಂಬಂಧಪಟ್ಟ ತಮ್ಮ ಅಧಿಕಾರಿಗಳಲ್ಲಿ ಸ್ವಲ್ಪ ಅವರ ಕಿವಿಯಲ್ಲಿ ಹೇಳಬೇಕು. ಈ ರೀತಿ ಸುಧಾರಣೆ ತರಬೇಕೆಂದಿದ್ದೇವೆ. ಈ ಹೊಸ ಸುಧಾರಣೆಗಳನ್ನು ಅಸೆಂಬ್ಲಿಯಲ್ಲಿರುವ ಎಲ್ಲ ಮಾನ್ಯ ಸದಸ್ಯರೂ ಅಂಗೀಕಾರ ಮಾಡಿದ್ದಾರೆ. ಜೈಲುಗಳಲ್ಲಿ ನಾನೂ

(ಶ್ರೀ ಎಸ್. ಗೋಪಾಲಗೌಡ)

ಸುಧಾರಣೆ ಮಾಡಬೇಕೆಂದಿದ್ದೇನೆ. ನೀವೆಲ್ಲರೂ ನನಗೆ ನಿಮ್ಮ ಸಹಕಾರಗಳನ್ನು ನೀಡಬೇಕು. ಖೈದಿಗಳನ್ನು ಜೈಲಿನಿಂದ ಹೊರಗೆ ಹೋದಬಳಿಕ ಅವರು ಮುಂದೆ ಒಳ್ಳೆಯ ಕೆಲಸಗಳನ್ನು ಮಾಡುವಂತೆ ನೋಡಿಕೊಳ್ಳಲು ನನ್ನ ಜೊತೆಯಲ್ಲಿ ನೀವೂ ಸಹಕರಿಸಿ ಕೆಲಸಮಾಡಬೇಕು " ಈ ರೀತಿ ಹೇಳಿ ಅವರಿಗೆ ಕಟ್ಟುನಿಟ್ಟಾಗಿ ಹೇಳಬೇಕು. ಆದುದರಿಂದ ಉಸ್ತುವಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಸಭೆಯ ಮಾನ್ಯ ಸದಸ್ಯರುಗಳೆಲ್ಲಾ ವ್ಯಕ್ತಪಡಿಸಿರತಕ್ಕ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ಅವರ ನಡೆ, ನುಡಿ, ಇವುಗಳಲ್ಲಿ ಬದಲಾವಣೆಗಾಗಿ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಇಷ್ಟು ಹೇಳಿ ಇಲ್ಲಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ,

Sri B. R. SUNTHANKAR (Belgaum).—Sir, as stated in the Statement of Objects and Reasons, this Bill is brought forward to have a uniform law for the execution of various types of punishments awarded by Courts, as applicable to the entire State of new Mysore. I fail to understand the necessity of bringing a separate Act for this purpose. All these clauses and provisions could have easily been incorporated in the Provisions Act.

Mr. SPEAKER.—If they have not been there, they have to be here.

Sri B. R. SUNTHANKAR.—The Home Minister was pleased to in corporate all the various Acts into one Police Bill. Similarly, he could have easily done the same in this case also by making one legislation only. This Bill deals with only one aspect, that is the administration and removal of prisoners as well as lunatic prisoners. That is the main provision in this Bill. The title of the Bill is, 'The Mysore Prisoners Bill'. When I first read the list of Bills in the Dircular suppliced to us I expected that this Prisoners Bill would be a comprehensive Bill giving all the requisite provisions, and would provide for corrective, curative and rehabilitation measures that will be adopted by the Jail administrv tion. But, there is nothing of that sort. Only the administratiae view point regarding this removal of prisoners is looked after in this Bill. The main purpose of these Prisons is that Government should see that the prisoners return to the Society as good men, after they are discharged from prisons.

[MR. DEPUTY SPEAKER in the Chair]

In recent years, there has been a lot of new thinking on the Jai administration and the prison life opinion in Western countries has far advanced in this respect. In the continent of Europe as well as in America, they have carried a lot of reforms in the Jail administration. I take the liberty to refer to the postwar Prison reforms in Swede:

The first paragraph of Chapter 4 of the Prison Act of 1945 reads as follows:—

"The inmate shall be treated with firmness and earnestness and with the consideration due to him as a human being. He is to be employed at suitable labour and, furthermore, shall

receive such treatment as promotes his adaptation to social life. The injurious effects of confinement must be prevented as much as possible."

This is one of the sections in that Swedish Prison Act 1945. Sir, by this Act, a prisoner in Sweeden is entitled to certain rights. In prison life also, within the four walls of prison, a prisoner is entitled to certain rights. If we look from that point of view at this Bill, we are disappointed. We find nothing of the sort. The Bill Sir, I may say, fails to provide any such rights to the prisoners here. Similarly Sir, the United Nations Organisation has also been dealing with this question of Jail administration and the life of the prisoners. Sir, they have prescribed certain standard minimum rules for the treatment of prisoners, and these rules were approved by the United Nations European Consultative Group. Rule 6 says: "Sir, the purpose of training and treatment of convicted prisoners shall be to establish in him a will to lead a good and useful life." Further Sir, it is said in rule 154 that training in prison shall be decent and carry out the purposes specified in rule 6 and shall include (1) the provision of work which will so far as practicable help to enable him to earn a living. (2) Special attention to education, (3) exercise of personal influence on the character and training of individuals, the provision of every opportunity for the development of a sense of personal responsibility, including the provision for suitable personal training in open conditions. These are provisions in the rules that are prescribed or that are recommended as the standard minimum rules by the UNO. Similarly Sir, it is said in these rules that the prison regime should be one of constructive training moral, mental and vocational. These are all the new ideas that have been embodied and that are brought into practice in the advanced countries. If you look from that viewpoint at this Bill, it is very disappointing.

Similarly Sir, I have again to refer to Sri Chandrasekhara Iyer Committee Report. Yesterday, the Hon'ble Minister remarked that this was an old report and that after this report was submitted in 1941, the old Mysore Government passed a legislation in 1943. So, it was his inference that this report was rejected. I do not know whether this report was rejected by the old Mysore Government or not. But in 1943 a new legislation came into existence as a consequence as a result o this report. Even if we agree that this report was rejected, it will not lose its value or its merits. Its valuable recommendations will have to be taken into consideration. Sir, the Hon'ble Minister said that this report was rejected in 1943 which means that he wants to stick on to conditions in 1943. He refuses to go beyond 1943. That means he wishes to remain 20 years behind. Sir, during the last 20 years, there have been so much advancement in prison reform.

SRI R. M. PATIL.—We have adopted some of them.

SRI B. R. SUNTHANKAR.—I know that. Some of them have been adopted. I do not say no. Similarly Sir, the Hon'ble Home Minister was pleased to say yesterday when my Hon'ble friend Sri Namoshi said

(SRI B. R. SUNTHANKAR)

that ganja was available in jails, the Hon'ble Minister said that these things are unbelievable. That shows his ignorance. Excuse me if I say so. So many things are happening in jails. In Bellary jail we know that liquor was freely being smuggled in. And I may tell a very interesting incident that happened in Belgaum. So many interesting and strange things happen in jails. The Bombay system is the most advanced. It is the most advanced system known for stricter discipline, for a rigorous system. But even in that jail some funny and interesting incidents have happened. There was a criminal Tribe Settlement in Belgaum. Now these settlements are abolished. When the Settlement was there, the Catholic nuns used to visit these settlements very often. Once some of these nuns found two children with blue eyes and blue eyes showed their European pedigree. When these nuns spotted out these blue eyes in the settlement, the Catholic nuns began to investigate whose children these were and it was found Sir, after enquiry and investigation, that these children were the children of a woman convicted prisoner in the Hindalge Jail and on enquiry they found out that this particular woman was purposely going to the jail frequently after committing offences. At that time, there was European military at Belgaum and some Tommies were hovering round the jail and when this particular woman was let out for work outside the jail, she was having love affair with some of the tommies and those children were the children begotten to that woman as a result of that affair with tommies. Such things happen, Sir. I quote this instance to show that such things do happen in jail.

SRI J. H. SHAMSUDDIN (Deputy Minister for Electricity).—It has happened outside the jail.

SRI B. R. SUNTHANKAR.—It has happened when she was still under the custody of the jail authorities.

SRI V. M. DEO (Gubbi).—Does the Hon'ble Member maintain that it is the direct result of that affair, because it is also said that even if you look at the photos, you can have such results.

SRI B. R. SUNTHANKAR.—I am simply narrating this incident. The Chandrasekhara Iyer Committee has really made some valuable recommendations and even after 20 years, they do not lose their value or merit. I say they have made very good recommendations. They have recommended that habitual offenders should be segregated and kept separately. They have recommended that there should be a separate central prison for habitual offenders. They have said that other prisoners should not be mixed up with these habitual offenders. So, there should be separate jails or separate arrangements or separate blocks for these habitual offenders in all the jails.

Another of their suggestion is that there should be compulsory education for all the prisoners in the prisons.

SRI R. M. PATIL.—It is there. We have 89 per cent literacy.

Sri B. R. SUNTHANKAR.—May I know whether the Government appointing special teachers for that?

Sri R. M. PATIL.—Yes, even Hindi.

Sri B. R. SUNTHANKAR.—If that has been adopted, it is a good thing, Sir.

Similarly Sir, the Committee recommended that there should be separate female teachers to impart instructions to women prisoners and impart instructions not only in primary education, but impart instruction in domestic subjects and music also. I do not know whether this Government has made any arrangements regarding imparting instruction in domestic subjects and music. If not, the Government should introduce this instruction as early as possible.

About the vocational training, I would like to emphasise one point regarding agricultural farms. There are immense possibilities in this respect. There is one farm at Hunsur, but that is meant for the released prisoners. I know of no agricultural farms inside the prisons for the convicted prisoners. Government should have such colonies just as I said a little while ago while sponsoring the cause of open farms that open farms should be converted into agricultural farms because the majority of prisoners are drawn from the agricultural class. If the agricultural farms are introduced and improved methods are adopted in the agricultural farms, that will also given training and education to the prisoners in improved methods of agriculture. Similarly, the Iyer Committee has made a very important suggestion regarding the prisoners sent for default of payment of fine. In one of their recommendations they say: "The number of simple imprisonment prisoners is needlessly increased by sentence for payment of fine. Time and facilities should be given to the accused for the payment of fine in reasonable instalments. If such facility is given to the accused to pay the fine in reasonable instalments, the number of such prisoners will be decreased. It is no use increasing the number of prisoners unnecessarily for such small reasons."

3-00 P.M.

Then I will come to clause 9. Clause 9 deals with the lunatic prisoner, how they should be dealt with. This clause deals with mental cases. The right place for the mental cases is not the criminal prison, but the mental hospital. The Iyer Report deals at some length with the mental cases. They have made very useful recommendations which the Government should adopt as early as possible. About the removal of lunatic priosners, according to this clause the responsibility is with the State Government and not with the lower officers. In this respect I would like to make another suggestion. It will take a lot of time to detect whether a prisoner is a prisoner of a mental case or some mental defect and for the jail authorities to report to the State Government and then the State Government to recommend to removal of such prisoners, t is very likely that a lot of time will elapse in this procedure. So my uggestion is that the Superintendent of the Jail should be authorised

(SRI B. R. SUNTHANKAR)

in this respect and for that, periodical examination of all prisoners by mental experts should be conducted. I want to say that there should be periodical examination of all prisoners by mental experts; because the criminal mentality or the tendency to commit crimes and offences is also a psychological problem. The theory of psychoanalysis has thrown a flood of light on criminology as well as tendency to commit crimes and offences; it is a psychological phenomena. As the psychoanalysis reveals, it is due to some mental defects, some neurotic trends or some psychological causes that individuals are tempted to commit crime of offence. That is why this aspect of the tendency to commit crime will have to be thoroughly examined and for that, every prisoner should be examined by a mental expert. There should be a periodical examination of the prisoners by a mental expert, a register of those examinations should be kept such examination will help to remove criminal tendencies among the prisoners and on the basis of this mental examination curative measures, corrective measures can be adopted. If such periodical examinations are held by mental experts, the Jail Superintendent can easily find out the mental cases and if such mental cases occur, the Jain Superintendent should be authorised to remove such prisoner from the prison to the mental hospital. That will be an easy procedure. There are certain cases which cannot be classed as lunatics but which can be lassed as "mentally weak". Again I have to refer to the Iyer ommittee Report. They say while dealing with the mental defectives,

> "There is another class of cases namely that of weak minded individuals who are constantly returning to jail for some anti-social acts for which they are not really responsible, they are not sufficiently insane to require treatment in a mental hospital but they neverthless cannot be adequately controlled by these relatives"

The Indian Jails Committee observed in their Report as follows:

> "There is to be found in all prisons in India a certain amount of mentally defective persons. The presence of such prisoners in jail is open to great objection. They constitute a very serious difficulty in the way of proper jail administration. They break rules. They refuse or ignore labour. They endanger discipline and they generally exercise bad discipline. In the interests of jail, it is very desirable that they should be removed while in their own interests it would be most advantageous if they are placed in an institution entirely reserved for defectives, in the mental hospital where they would be under the care of officers specially trained in the treatment of this class of mental cases."

So these mentally weak prisoners should be treated separately because they cannot come under the category of lunatics. We find in society a

number of mental cases which are not admitted in the mental hospitals and they become a source of great nuisance to the society while freely moving in the people. Similarly, all the mental cases cannot be sent to the mental hospital. For such weak minded persons, for such mentally defective persons, a separate provision should be made. For this the Committee has recommended establishment of Home for mental defectives. Some States in India have established such Houses. Such Home for mental defectives should be set up and such mentally weak cases should be sent to those homes from the Prisons.

Then, Sir, clause 10.—Regarding this treatment to the prisoners undergoing life sentence, generally looking to the jail administration, I find that the jail administration is rather cruel to these life sentence prisoners. Some of these life sentence prisoners are very innocent people. I had the opportunity to converse with some of them while I was in jail. Some of them are quite innocent and in a fit of anger they had committed murders, losing their balance only at that moment and they had been repenting for it all the while. For such prisoners, the jail administration should not be very harsh and cruel. They should be treated with sympathy and broad-heart. They require more care because they have to pass in the prison 12 to 14 years and there they should not consider themselves as condemned persons. If the valuable recommendations of the Iyer Committee Report and the new ideas that have come in the field of jail administration are incorporated in the rules, though they are not incorporated in the Bill, I hope it will go a long way in improving our jail conditions. As Mahatma Gandhi once said, the jails should be social Hospitals for criminals. Government should see that, as the Father of the Nation said, the jails in this State will really prove to be social hospitals. With these words I conclude Sir.

ಶ್ರೀ ವಾಲಿ ಚನ್ನಪ್ಪ (ಸಂಪಗಾಂವ್ 1).—ಮಾನ್ಯ ಸಭಾಪತಿಗಳೇ, ಇದುವರೆಗೆ ಮಾತನಾಡಿದ ಮಾನ್ಯ ಸದಸ್ಯರು ಜೈಲು ಸುಧಾರಣೆ ಬಗ್ಗೆ ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಸೂಚನೆ ಮಾಡುವುದರಲ್ಲಿ ಒಂದು ವಿಚಿತ್ರ ವಾದ ನನಗೆ ಕಂಡುಬರುತ್ತದೆ. ಜೈಲಿಗೆ ಬಹಳ ಸಂತೋಷದಿಂದ ಕೈದಿಯಾಗಿ ಯಾರಾದರೂ ಹೋಗುತ್ತಾರೆಂದು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ನಾನು 1934ರಿಂದ 1946ರ ವರೆಗೆ ಅನೇಕ ಸಾರಿ ಜೈಲಿಗೆ ಹೋಗಿದ್ದೇನೆ. ಕೆಲವರು ತುಡುಗು ಮಾಡಿ ಮೆಣಸಿನಕಾಯಿ ತೆಗೆದುಕೊಂಡ ಹೋಗಿ ಪೋಲೀಸರ ಕಡೆ ಹೊಡೆಯುತ್ತಾರೆ. ಯಾಕಂದರೆ ಅವರಿಗೆ ಜೈಲಿಗೆ ಹೋಗಬೇಕಾಗಿರುತ್ತದೆ. ಹೊರಗೆ ಇರುವುದು ಸೂಕ್ತವಲ್ಲ ಜೈಲಿಗೆ ಹೋಗಬೇಕು ಎಂದು ಅವರು ಹೇಳುತ್ತಾರೆ. ಜೈಲಿನಲ್ಲಿ ಎರಡು ಹೊತ್ತು ಊಟ, ಹೊದೆಯಲು ಬಟ್ಟೆ, ಹಾಸಿಗೆ ಬೆಚ್ಚಗೆ ಇರಲು ಕೋಣೆ ಇವು ಸಿಕ್ಕುತ್ತವೆಂದು ಅಂಥವರು ತುಡುಗು ಮಾಡಿ ಅದಕ್ಕಾಗಿ ಶಿಕ್ಷೆಗೆ ಒಳಗಾಗಿ ಜೈಲಿಗೆ ಬರುತ್ತೇವೆಂದು ಹೇಳುತ್ತಾರೆ. 1930 ರಿಂದ 1946ರ ವರೆಗೆ ನಾನು ಜೈಲಿಗೆ ಹೋಗಿದ್ದೇನೆ. ಸ್ವಾತಂತ್ರ್ಯ ಬಂದ ಮೇಲೂ ಸಹ ಕರ್ನಾಟಕ ಪ್ರಾಂತ ರಚನೆ ಸಲುವಾಗಿ ನಾನು ಜೈಲಿಗೆ ಹೋಗಿದ್ದೇನೆ. ಏಕೆ ಮೇಲಿಂದ ಮೇಲೆ ಜೈಲಿಗೆ ಬರುತ್ತೀರಿ? ಹೊರಗೆ ನಿಮಗೆ ಯಾವುದಾದರೂ ಉದ್ಯೋಗವಿಲ್ಲವೆ ಎಂದು ನಾನು ಕೈದಿಗಳನ್ನು ಕೇಳಿದ್ದೇನೆ. ಕೆಲವರ ಮಾನಸಿಕ ಪರಿವರ್ತನೆಯಾಗುತ್ತದೆ. ಜೈಲಿಗೆ ಬಂದ ಮೇಲೆ ಕೆಲವರಿಗೆ ಪಶ್ಚಾತ್ತಾಪವಾಗಿದೆ ಎಂಬುದು ಕಂಡು ಬಂದಿದೆ ದೊಡ್ಡ ಗುನ್ಹೆ ಅಂದರೆ ಖೂನಿ ಮಾಡುವಂಥ ಅಪರಾಧಿಗಳಿಗೆ ಪಶ್ಚಾತ್ತಾಪವಾಗಿದೆ. ಅವರ ಪರಿಸ್ಥಿತಿ ಬಹಳ ಅಸಹ್ಯಕರವಾಗಿದೆ. ಜೈಲಿನಲ್ಲಿ ಸರಿಯಾದ ವ್ಯವಸ್ಥೆ ಇಲ್ಲ.

ಶ್ರೀ ಆರ್. ಎಂ. ಪಾಟೀಲ್.—ಸ್ವತಃ ನೋಡಿಕೊಂಡು ಬಂದು ಹೇಳುತ್ತಿದ್ದೀರೋ ಅಥವಾ ಅಂದಾಜಿನ ಮೇಲೆ ಹೇಳುತ್ತೀರೋ?

ಶ್ರೀ ಚನ್ನಪ್ಪ ವಾಲಿ.—ಅಂದಾಜಿನಿಂದ ಅಲ್ಲ. ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ.

ಶ್ರೀ ಆರ್. ಎಂ. ಪಾಟೀಲ್.—ಹಾಗಾದರೆ ಈಗಿನ ಅನುಭವ ನಿಮಗೆ ಇಲ್ಲ.

ಶ್ರೀ ವಾಲಿ ಚನ್ನಪ್ಪ.—ನಿಮಗೆ ಮಾತ್ರ ಹಿಂದಿನ ಅನುಭವ ಗೊತ್ತಿಲ್ಲ. ಈಗಿನ ಅನುಭವವೂ ಇಲ್ಲ. ನಾನು ಬ್ರಿಟೀಷರ ಅಧಿಕಾರವಿದ್ದಾಗ ಕೂಡ ಜೈಲಿಗೆ ಹೋಗಿದ್ದೆ. ಸ್ವಾತಂತ್ರ್ಯ ಬಂದ ಮೇಲೂ ಸಹ ಜೈಲಿಗೆ ಹೋಗಿದ್ದೇನೆ. ನಿಮಗೆ ಅದೂ ಗೊತ್ತಿಲ್ಲ ಇದೂ ಸಹ ಗೊತ್ತಿಲ್ಲ. ಬೆಳಗಾಂವಿಯ ಜೈಲಿನಲ್ಲಿ ಆಹಾರ ಧಾನ್ಯ ಕೊಡುವುದು ಸರಿಯಾಗಿಲ್ಲ. ಆಹಾರ ಧಾನ್ಯ ಬದಲಾವಣೆ ಮಾಡಬೇಕು ಎಣ್ಣೆ ಕಡಿಮೆ ಸಿಕ್ಕುತ್ತದೆ ಎಂದು ನಾನು ಬರೆದು ತಿಳಿಸಿದ್ದೇನೆ. ಹಳೇ ಮೈಸೂರು ಪ್ರದೇಶದಲ್ಲಿಯ ಜೈಲುಗಳಲ್ಲಿ ಒಂದು ತರಹ ಇದೆ. ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಒಂದು ತರಹ ಇದೆ. ಮಳೆಗಾಲ ದಲ್ಲಿ ಎಣ್ಣೆ ಪ್ರಮಾಣ ಕಡಿಮೆ ಕೊಡುತ್ತಾರೆ, ಚಳಿಗಾಲದಲ್ಲಿ ಜಾಸ್ತಿ ಇರುತ್ತದೆ. ಕೊಡತಕ್ಕಂಥ ಆಹಾರದಲ್ಲಿ ವ್ಯತ್ಯಾಸ ಆಗಬಾರದು. ನಮ್ಮಲ್ಲಿ ಇನ್ನೂ ಬದಲಾವಣೆಯಾಗಿಲ್ಲ. ಹೀಗೆ ಏತಕ್ಕೆ ಆಗು ತ್ತದೆಂದು ನಾನು ಕಾಗದ ಬರೆದಿದ್ದೇನೆ. ಅದಕ್ಕೆ ಉತ್ತರವಾಗಿ ಐ. ಜಿ. ಅವರು ಒಂದು ಕಾಗದ ನನಗೆ ಬರೆದಿದ್ದಾರೆ. ಅದನ್ನು ನೋಡಲು ನಿಮಗೆ ಬೇಕಾದರೆ ಕಳಿಸಿಕೊಡುತ್ತೇನೆ. ಈ ಇಲಾಖೆಗೆ ಸಂಬಂಧ ಪಟ್ಟವರು ಆಗಿರುವುದರಿಂದ ತಾವೇ ಬೇಕಾದರೆ ಅವರನ್ನು ಕೇಳಿ ತಿಳಿದುಕೊಳ್ಳಬಹುದು. ಜೈಲಿನಲ್ಲಿರುವಾಗ್ಗೆ ಉದ್ಯೋಗ ಮಾಡಲು ಅವಕಾಶವಿರುವಹಾಗೆ ಹೊರಗೆ ಬಂದ ಮೇಲೆ ಅನುಕೂಲ ವಿರುವುದಿಲ್ಲ. ಕಾರ್ಪೆಂಟರ್ ಧಂಥೆ ಮಾಡುವವನು ಒಂದು ದಿವಸಕ್ಕೆ ನಾಲ್ಕೈದು ರೂಪಾಯಿ ಸಂಪಾದನೆ ಮಾಡುತ್ತಾನೆ. ಗುಲಬರ್ಗಾ ಮತ್ತು ಬೆಳಗಾಂವ ಸೆಂಟ್ರಲ್ ಜೈಲಿನಲ್ಲಿ ಈ ರೀತಿ ಸಂಪಾದನೆ ಮಾಡುತ್ತಿದ್ದಾರೆ. ಸಾಧಾರಣವಾಗಿ ಒಬ್ಬ ಮನುಷ್ಯನು ಐದಾರು ರೂಪಾಯಿ ವರೆಗೆ ಸಹ ಗಳಿಸುತ್ತಾನೆ. ಇದು ಒಳ್ಳೆಯದಾಗಿದೆ. ಉದ್ಯೋಗ ದೃಷ್ಟಿಯಿಂದ ಬೆಳವಣಿಗೆ ಮಾಡಲು ಸಾಧ್ಯವಿದೆ ಎಂದು ತಮಗೆ ಹೇಳಲು ಬಯಸುತ್ತೇನೆ.

ಇನ್ನು ಬೆಳಗಾಂವ್ ಸೆಂಟ್ರಲ್ ಜೈಲಿನಲ್ಲಿ ಔಷಧಿ ಕೊಡುವವರು ದಿಕ್ಕು ಇಲ್ಲ. ಒಬ್ಬನೇ ಡಾಕ್ಟರ್ ಇದ್ದಾನೆ.

ಎಂಟು ದಿವಸಕ್ಕೆ ಒಮ್ಮೆ ಸಿವಿಲ್ ಸರ್ಜನ್ ಬರುತ್ತಾರೆ. ಅವರನ್ನು ನೋಡುತ್ತಾರೆ. ಹಿಂದೆ ಬ್ರಿಟಿಷರ ಕಾಲಕ್ಕೆ ನೋಡಿದ್ದೇನೆ 1930 ರಲ್ಲಿ ಇದ್ದೆ 1940 ರಲ್ಲಿ ಇದ್ದೆ. 1942ರಲ್ಲಿ ನಾನು ಜೈಲಿನಲ್ಲಿ ಇದ್ದೆ. ಅಲ್ಲಿ 3 ಮಂದಿ ಡಾಕ್ಟರುಗಳು ಇರುತ್ತಾ ಇದ್ದರು ಈಗ ಒಬ್ಬರು ಡಾಕ್ಟರು ಇದ್ದರೆ ಅಷ್ಟು ಜನ ರನ್ನು ನೋಡುವುದಕ್ಕೆ ಅವರೊಬ್ಬರಿಂದ ಹೇಗೆ ಸಾಧ್ಯವಾಗುತ್ತದೆ ? 20 ವರ್ಷಗಳಿಂದ ಇದ್ದ ಖೈದಿ ಗಳನ್ನು ನಡೆಸಿಕೊಳ್ಳುವ ರೀತಿ ಮೊದಲಿನ ರೀತಿಗೂ ಈಗಿನ ರೀತಿಗೂ ಬಹಳ ಅಂತರವಿದೆ. ಆಗ ಒಬ್ಬ ಮನುಷ್ಯನಿಗೆ 12 ಔನ್ಸ್ ಆಹಾರ ಕೊಡುತ್ತಾ ಇದ್ದರು ಈಗ 8 ಔನ್ಸ್ ಕೊಡುತ್ತಾ ಇದ್ದೀರಿ. ಆಗ 12 ಔನ್ಸ್‌ಗೆ 3 ರೊಟ್ಟಿಗಳನ್ನು ಮಾಡಿ ಕೊಡುತ್ತಿದ್ದರು. ಈಗ 8 ಔನ್ಸ್‌ಗೆ 2 ರೊಟ್ಟಿಗಳನ್ನು ಮಾಡಿಕೊಡುತ್ತಾ ಇದ್ದಾರೆ. ಅದರಲ್ಲಿ ಏನೇನೂ ಸ್ವಾರಸ್ಯ ಇರುವುದಿಲ್ಲ. ಈ ರೀತಿ ಆಹಾರದಲ್ಲಿ ಬದಲಾ ವಣೆಯಾಗಿದೆ. ಹಿಂದಿನ ಪರಿಸ್ಥಿತಿ ಈಗ ಇಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಮುಗ್ಗಿದ ಜೋಳ ಹಾಕು ತ್ತಾರೆ, ಹುಳುತ ತರಕಾರಿ ಹಾಕಿ ಬೇಯಿಸುತ್ತಾರೆ. ನಾನು ಅಲ್ಲಿಗೆ ಹೋಗಿ ನೋಡಿದ್ದೇನೆ. ಹಿಂದಿನ ಕಾಲದಲ್ಲಿ ಒಂದ ಹುಳು ಬಂದರೆ 5 ದಿವಸ ಉಪವಾಸ ಇದ್ದು ಸುಧಾರಣೆ ಮಾಡಿಸುತ್ತಾ ಇದ್ದೆವು ಅದನ್ನೆಲ್ಲಾ ನೋಡಿದರೆ ಏನೇನೂ ಬದಲಾವಣೆಯಾಗಿಲ್ಲ. ಅದಕ್ಕೆ ಬದಲಾಗಿ ಇನ್ನೂ ಕೆಟ್ಟ ಪರಿಸ್ಥಿತಿ ಯುಂಟಾಗಿದೆ ಎಂದು ನನಗೆ ಭಾಸವಾಗುತ್ತಾ ಇದೆ. ಹಿಂದೆ ವರ್ಷಕ್ಕೆ ನಾಲ್ಕು ನಾಲ್ಕು ತಿಂಗಳ ತನಕ ರೆಮಿಷನ್ ಕೊಡುತ್ತಾ ಇದ್ದರು. ಅವರನ್ನು ಬಿಟ್ಟು ಬಿಡುವ ವ್ಯವಸ್ಥೆ ಇತ್ತು. ಯಾರ ಮನಸ್ಸು ಪರಿವರ್ತನೆಯಾಗುತ್ತದೆಯೋ ಅಂತಹವರನ್ನು ಬಿಡುವುದಕ್ಕೆ ಅವಕಾಶ ಇಟ್ಟುಕೊಂಡಿದ್ದರು. ಈಗ ಪೋಲೀಸಿನವರಿಗೆ ಯಾರು ರೊಕ್ಕ ಕೊಡುತ್ತಾರೋ ಅವರ ವಿಷಯದಲ್ಲಿ ಮಾತ್ರ ಸರಿಯಾಗಿ ಬರೆಯು ತ್ತಾರೆ ಈ ರೀತಿ ನಡೆದಿದೆ.

[MR. SPEAKER in the Chair.]

ಪೋಲೀಸಿನವರು ಅವರಿಗೆ ಬೇಡವಾದರೆ ಅವನ ಮನಸ್ಸು ಪರಿವರ್ತನೆಯಾಗಿದ್ದರೂ ಸಹ ಅವನ ನಡತೆ ಚಲೋ ಇಲ್ಲ ಅವನನ್ನು ಬಿಡಬಾರದು ಎಂದೇ ಬರೆದು ಕಳುಹಿಸುತ್ತಾರೆ. ಈ ರೀತಿ ಮಾಡಿದರೆ ಪಾಪ ಅವನಿಗೆ ನಿಜವಾಗಿಯೂ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ಇದನ್ನು ಸರಿಪಡಿಸಲಿಕ್ಕೆ ಒಂದು ಕಮಿಟಿ ಮಾಡಿ ಅವರು ಹೋಗಿ ಎಲ್ಲಾ ಕಡೆಯೂ ವಿಚಾರಣೆ ಮಾಡಿ ಜೈಲು ಸೂಪರಿಂಟೆಂ ಡೆಂಟರನ್ನು ಕೂಡಿಕೊಂಡು ಅವನ ರೀತಿ ಬದಲಾವಣೆಯಾಗಿದೆಯೋ ಹೇಗೆ ಎಂಬುದನ್ನು ವಿಚಾರಿಸಿ ಕೊಂಡು ಯಾವಾಗಲೂ ಗುನ್ಹೆ ಮಾಡತಕ್ಕ ಮನುಷ್ಯನೇ ಎಂಬುದನ್ನು ವಿಚಾರ ಮಾಡಿದರೆ ಆಗ ಸರಿ

ಯಾದ ರಿಪೋರ್ಟು ಬರುತ್ತದೆ ಇಲ್ಲದೆ ಇದ್ದರೆ ಬರುವುದಿಲ್ಲ. ಪೋಲೀಸರ ಕಡೆ ಕೊಡುವುದರಿಂದ ಅವರು ಒಂದೇ ಮಾತು ದುಡ್ಡು ಕೊಟ್ಟರೆ ಬರೆಯುತ್ತಾರೆ—ಕೆಲವು ಕಡೆ ಹೀಗೆ ಆಗಿದೆ. ಇದನ್ನು ಸರಿಪಡಿಸದಿದ್ದರೆ ಬಹಳ ತೊಂದರೆಯಾಗುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನು ಚಿಕ್ಕ ಚಿಕ್ಕ ಗುನ್ಹೆಗಳನ್ನು ಮಾಡುವವರು ಜಾಸ್ತಿಯಾಗುತ್ತಾ ಇದ್ದಾರೆ. ದೊಡ್ಡ ಗುನ್ಹೆಗಳು ನಮ್ಮ ಜಿಲ್ಲೆಯಲ್ಲಿ ನೂರಾರು ಗುನ್ಹೆಗಳು ನಡೆಯುತ್ತಾ ಇದ್ದ ಕಡೆ ಹತ್ತಿಪ್ಪತ್ತಕ್ಕೆ ಇಳಿದಿದೆ. ಇದನ್ನು ನೋಡಿದರೆ ಇದರ ಸಂಖ್ಯೆ ಮೊದಲಿಗಿಂತಲೂ ಕಡಿಮೆಯಾಗಿದೆ. ಇನ್ನು ಜೈಲಿನೊಳಗೆ ಹೋದರೆ ಅದು ಜೈಲು ಎಂದು ಅನಿಸುವುದಿಲ್ಲ ಅಷ್ಟು ಚೆನ್ನಾಗಿ ಮಾಡಿದ್ದಾರೆ, ಜೈಲಿನೊಳಗಡೆ ತೋಟ ಮಾಡಿರುತ್ತಾರೆ, ಅಂಬರ ಚರಕಾ ಇಟ್ಟುಕೊಂಡು ನೂಲು ತೆಗೆಯುತ್ತಾರೆ ಬಟ್ಟೆಗಳನ್ನು ಮಾಡುತ್ತಾರೆ, ಲೈಬ್ರರಿ ಇದೆ ಅಂಬರ ಚರಕಾದಲ್ಲಿ ನೂಲು ತೆಗೆಯುವವರಾಗಲೀ, ತಾರ್‌ಪೆಂಟ್ರಿ ಮತ್ತು ಸತ್ರಂಜಿ ಕೆಲಸ ಮಾಡುವವರಾಗಲಿ ಅವರಿಗೆ ಆ ಕೆಲಸ ಮಾಡುವುದರಿಂದ ತೃಪ್ತಿಯಾಗುತ್ತದೆ ಎಂದು ಮಾಡುತ್ತಾರೆಯೇ ಹೊರತು ಅದಕ್ಕಿಂತ ಜಾಸ್ತಿ ಹೊರಗೆ ಒಳ್ಳೆಯ ಜೀವನ ಸಾಗಿಸುತ್ತೇವೆ ಎಂದು ಅವರ ಮನಸ್ಸಿನಲ್ಲಿ ಇರುವುದಿಲ್ಲ, ಜೈಲಿನಲ್ಲಿದ್ದಾಗ ಕಾರ್‌ಪೆಂಟ್ರಿ ಆಗಲಿ ಇತರ ಕೆಲಸಗಳಾಗಲಿ, ಮಂಚ, ಖುರ್ಚಿ, ಮೇಜು ಇವುಗಳನ್ನೆಲ್ಲಾ ಮಾಡುತ್ತಾರೆ ಹೊರಗಡೆ ಹೋದ ಕೂಡಲೇ ಅದು ಯಾವುದನ್ನೂ ಮಾಡುವುದಿಲ್ಲ ಏಕೆ ಎಂದರೆ ನಮಗೆ ಬೇಕಾದ ಸಲತರೇಕೆಗಳು ಸಿಗುವುದಿಲ್ಲ ಎಂದು ಹೇಳುತ್ತಾರೆ. ಅದೇ ಜೈಲಿನಲ್ಲಾದರೆ ನನಗೆ ತೃಪ್ತಿಯಾಗುತ್ತದೆ ಕಾಫಿ ಸಿಕ್ಕುತ್ತದೆ ಎಂದು ಮಾಡುತ್ತೇವೆ ಎಂದು ಹೇಳುತ್ತಾರೆ. ಆದ್ದರಿಂದ ಹೊರಗಡೆ ಹೋದಮೇಲೂ ಕೂಡ ಅವರಿಗೆ ಸಮಾಜಿಕ ಚಟುವಟಿಕೆಗಳಲ್ಲಿ ನಿರತರಾಗಿ ಒಳ್ಳೆಯ ಜೀವನವನ್ನು ನಡೆಸಿಕೊಂಡು ಹೋಗಲು ತಕ್ಕ ವಾತಾವರಣವನ್ನು ಕಲ್ಪಿಸಿಕೊಟ್ಟು, ಅದಕ್ಕೆ ತಕ್ಕ ಶಿಕ್ಷಣ ಕೊಟ್ಟು ಬೇಕಾದರೆ ಕೆಲವು ಕೇಂದ್ರಗಳನ್ನೂ ಕೂಡ ತೆರೆಯುವುದು ಒಳ್ಳೆಯದು ಎಂದು ಹೇಳಿ ನಾನು ತಿಳಿಸಬಯಸುತ್ತೇನೆ.

ಅವರು ಒಳಗಿನಿಂದ ಹೊರಗೆ ಬಂದ ಕೊಡಲೆ ಅವರಿಗೆ ಏನಾದರೊಂದು ಉದ್ಯೋಗವನ್ನು ಕಲ್ಪಿಸಿ ಅವರು ನಿರುದ್ಯೋಗಿಗಳಾಗಿರಲು ಅವಕಾಶವಿಲ್ಲದಂತೆ ಮಾಡಬೇಕೆಂದು ಹೇಳುತ್ತೇನೆ. ಇದರಿಂದ ಆ ಜನರಿಗೆ ಅನುಕೂಲವಾಗುವುದಲ್ಲದೆ ಸರ್ಕಾರಕ್ಕೂ ಒಳ್ಳೇ ಹೆಸರು ಬರುತ್ತೆ. ಇಷ್ಟು ಮಾತುಗಳನ್ನಾಡಲು ನನಗೆ ಅನುವುಮಾಡಿಕೊಟ್ಟದ್ದಕ್ಕಾಗಿ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

3-30. P. M.

† Sri D. PARAMESHWARAPPA (Honnali).—Mr. Speaker, Sir, Though this Bill does not require any lengthy discussion, I would like to make a few observations about this Bill. On a superficial reading of this Bill, it appears to me that it is very misleading inasmuch as the word 'prisoner' is not defined in this Bill. Moreover, I would like to ask the Minister whether there was any necessity for bringing a separate Bill called 'The Prisoners Bill'. The provisions that have been made in this Bill could have as well found a place in the Bill called 'The Prisons Bill.' In contending so, I wish to draw the attention.........

Mr. SPEAKER.—Drawing the attention is no use, because the House has already passed that Bill. The Hon'ble Member has to deal with the present Bill only.

Sri D. PARAMESHWARAPPA.—I think, I am not relevant in making such a suggestion.

Mr. SPEAKER.—He is perfectly right.

Sri D. PARAMESHWARAPPA.—These provisions could have as well found a place in the Prisons Bill. Therefore, to that extent, I submit that there was absolutely no necessity of a separate Bill called the 'Prisoners Bill'. It is an accepted principle, universally accepted principle, that every prisoner must be dealt with according to law. Now-a-days, we are seeing that the strength of prisoners in the jails is

(SRI D. PARAMESHWARAPPA)

increasing and we have to analyse and find out the various reasons for the increase of prisoners in the jails. To think of a prison without a prisoner, as was said by one of my friends, is unthinkable, because these two words go together. We cannot think of a prisoner without a prison and we cannot think of a prison without a prisoner. Only the persons who have committed certain offences, are tried by Courts of Law and after due trial they are sentenced and convicted, and such persons remanded to Jail are called 'prisoners'. There are other categories of prisoners, civil prisoners also, who have been arrested by the order of the Civil Court and have been detained in prison. There are other persons also, who have been convicted under special laws and they are also in the prison. So, there are many categories and we will have to classify the prisoners according to their temparament. As submitted by one of my friends, there are what are called the habitual offenders and they are by nature bound to commit offences and are incorrigible. Whatever reforms and whatever transformation we bring about with regard to them will be of no avail, and such prisoners, who are incorrigible, in spite of our best efforts to reform them, should be secreted and should be kept in a separate jail. That is an important factor that has got to be borne in mind. There are certain other factors which drive the person to commit an offence. Offences may be committed for various reasons. Necessity may drive a person to commit an offence. Necessity knows no law. When a person is in dire necessity, he may not consider the rules that have been framed by the Legislature and he may violate those rules because of necessity. Another reason which is most important is exploitation; exploitation either by individual or by Government. Now-a-days, in democracy, we are seeing the Government in its collective nature. When I refer that there is exploitation, that an offence can be committed due to exploitation and that exploitation can be committed either by an individual or by State Government, my submission is that when exploitation is committed it is called an individual exploitation, but when it is committed by the Government it is called collective exploitation. I can prove that every act of the Government now-a-days is an act of exploitation. I think, on this occasion, it is not proper on my part to criticize the Government on that point.

Then, there are other set of people, who really in a fit of anger commit offences and who really repent afterwards. Such peopl can be very easily reformed and certain amount of mercy could be shown with regard to such people. I differ from the opinion of certain of my friends that every possible facility should be afforded to every prisoner in the jail. I differ to a slight extent on this point. Jails or prisons, in my opinion, should be all inspiring to a limited extent so far as offenders are concerned.

I refer to the habitual offenders who are incorrigible. In such cases, I feel that the imprisonment or the treatment that is meted out to them in prisons should be very rigorous. And it should be awe-inspiring. It

should imbibe in their minds that they should not commit any further offence when they are released. Sir, as you are aware when you were an advocate you know the various occasions wherein these habitual offenders have been a menace to society. The other factor when a person could commit an offence may be economic factor. These economic factors may be either due to poverty or any other factor. The other factor is the psychological factor, as was submitted by my learned friend Sri B. R. Sundankar. Sir, there are certain people who have that tendency by birth to commit an offence and so many other offences which we cannot rectify. It is by nature. Therefore, we will have to study the psychological aspect of a human being and find out the various environments to meet the requirements of the situation. Therefore, what I submit is that by classifying all these prisoners according to the commission of offences, Government should see that congenial environment is afforded to them so that they may not commit offences any further. That is one suggestion which I wish to make on this occasion.

Then Sir, with regard to the provisions for the removal of prisoners and so far as lunatic prisoners are concerned, some provision has been made in this Bill and at the outset, I have said that this Bill is unnecessary, because all these provisions could have found a place in the other Bill.

Finally with regard to this Bill, I submit that the provisions mentioned in this Bill could as well be incorporated in the Prisons Bill and hence, I support the Bill with the observations I have made.

ಶ್ರೀ ವಿ. ಎಂ. ದೇವ್.—ಸ್ವಾಮಿ, ಈ ಬಿಲ್ಲಿನಲ್ಲಿರೋ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ಗಳಲ್ಲಿ ಏನು ಕೊಟ್ಟಿದ್ದಾರೆ ಅದು ಸಾಧುವಲ್ಲ ಎಂದು ನನಗನಿಸುತ್ತದೆ. ಅದರಲ್ಲೂ ಜೈಲು ಅಡ್ಮಿನಿಸ್ಟ್ರೇಷನ್ನಲ್ಲಿ ಇದು ಬಹಳ ಹಿಂದೆ ಹೋಗಿದೆ. ಇನ್ನೊಂದು ಈ ದಿವಸ ಇಲ್ಲಿ ಮಾತನಾಡಿದ ಸರ್ವಶ್ರೀಗಳಾದ ಗೋಪಾಲ ಗೌಡರು, ಸುನ್‌ಕಾರ್‌ರವರು ಹಾಗೂ ಕಾಂಗ್ರೆಸ್ ಪಕ್ಷದ ಶ್ರೀ ಚೆನ್ನಪ್ಪನವರು ಏನು ಹೇಳಿದರು ಅವೆಲ್ಲಾ ಒಂದಕ್ಕೊಂದು ಪೂರಕವಾಗಿದ್ದವು. ಈ ಮೂರು ಭಾಷಣಗಳನ್ನು ಕೇಳಿ ತಾರ್ಕಿಕವಾಗಿ ನಾವು ಯಾವ ತೀರ್ಮಾನಕ್ಕೆ ಬರಬಹುದು ಎನ್ನುವ ದೃಷ್ಟಿಯಿಂದ ಇಲ್ಲಿ ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ. ಈ ಬಿಲ್ಲಿನಲ್ಲಿ ಸೈಂಟಿಫಿಕ್ ಆಗಿ ಹೇಳುವುದಾದರೆ ಇದೊಂದೂ ಅರ್ಥವಾಗುವುದಿಲ್ಲ. ಪುಟ 4 ಕ್ಲಾಸು 7ರಲ್ಲಿರುವ ಸಬ್ ಕ್ಲಾಸ್ (2)ರಲ್ಲಿ

(2) Pending orders on a reference made under sub-section (1) the prisoner shall be detained in such manner and with such restrictions and mitigations as may be specified in the warrant or order .. ..

ಆರ್ಡರುಗಳು ಬರದೆ ಎರಡ್ಲಾದರೂ ಉಂಟೇ ? ಇದರ ಅರ್ಥ ಏನು ಎನ್ನುವುದನ್ನು ನಾನು ಸರಕಾರದಲ್ಲಿ ಕೇಳುತ್ತೇನೆ. ಆಳವಾಗಿ ಸರಕಾರದವರು ಇದನ್ನು ಯೋಚನೆ ಮಾಡಿ ಹೇಳಲಿ. ಒಟ್ಟಿನಲ್ಲಿ ಎಷ್ಟು ಜನ ಮಾನ್ಯ ಸದಸ್ಯರು ಇಲ್ಲಿ ಮಾತನಾಡಿದ್ದಾರೆ. ಒಬ್ಬ ಮನುಷ್ಯ ಇವೊತ್ತು ಯಾವ ಒಂದು ದರ್ಜೆಯ ಬಂದಿಯಾಗಿರಲೇಬೇಕು. ಅದಕ್ಕೆ ಕಟ್ಟಕಡೆಗೆ ಹೊಣೆಗಾರಿಕೆ ಎಲ್ಲಿಗೆ ಹೋಗುತ್ತದೆ ಎನ್ನುವುದನ್ನು ದೀರ್ಘವಾಗಿ ಯೋಚನೆ ಮಾಡಿದರೆ ಸರಕಾರ ಎಂದು ನನಗನಿಸುತ್ತದೆ. ಏಕೆಂದರೆ, ಯೋಜನೆ ಪ್ರಕಾರ ಕೆಲಸ ಮಾಡಿ ಸ್ವಭಾವವನ್ನು ತಿದ್ದುತ್ತೇವೆ, ಎಂದಿದ್ದಾರೆ. ಅದರಲ್ಲೂ ಇದು ಪರಮಾಣು ಯುಗ. ಈ ಕಾಲದ ಪಕ್ಷಿ ಯಾವ ವೇಗದಲ್ಲಿ ಹೋಗುತ್ತಿದೆ ಎಂದರೆ ನಿಜವಾದ ಮಿಂಚು ಪ್ರಳಯ ವೇಗದಲ್ಲಿ ಹೋಗುತ್ತಿದೆ. ಇದಕ್ಕೆ ಮನುಷ್ಯನೇ ಒಂದು ಅಳತೆಯ ಕೋಲನ್ನು ಮಾಡಿದ್ದಾನೆ. ಆ ಅಳತೆ ಗೋಲೆ ಪಂಚವಾರ್ಷಿಕ ಯೋಜನೆ. ಅದಕ್ಕೆ ತಕ್ಕಂತೆ ಈಗ ಪಂಚವಾರ್ಷಿಕ ಯೋಜನೆಗಳನ್ನು ಮಾಡಿಕೊಂಡು ಎಷ್ಟೋ ಸುಧಾರಣೆಗಳನ್ನೂ ಮಾಡುತ್ತಾ ಬಂದಿದ್ದೇವೆ. ಈ ಯಂತ್ರ ತಾಂತ್ರಿಕ ಪರಮಾಣು ಯುಗದಲ್ಲಿ ಬುದ್ಧಿವಂತಿಕೆಯಿಂದ ಪ್ರಣಾಳಿಕೆಗಳನ್ನು ಚೆನ್ನಾಗಿ ಕೆಲಸ ಮಾಡುವುದಾದರೆ ಆಗ ಒಂದು ಮಹತ್ವ ಎದ್ದು ಕಾಣಬಹುದು. ಎಲ್ಲಾ ದರ್ಜೆಯ ಬಂದಿ

(ಶ್ರೀ ವಿ. ಎಂ. ದೇವ್)

ಗಳ ಸಂಖ್ಯೆ ತೀವ್ರವಾಗಿ ಕಡಮೆಯಾಗುತ್ತದೆ. ಬಂದಿಗಳೇ ವಿರಳವಾಗುತ್ತಾರೆ. ಇದರ ಸೂತ್ರ ನಡೆಸುತ್ತಿರುವ ಸರಕಾರವೂ ಇದರೊಳಗೆ ಬರುತ್ತದೆ. ಈ ದೃಷ್ಟಿಯಿಂದ ನನಗನಿಸುವುದು ನಾವು ನಮ್ಮ ಆಲೋಚನೆಯಲ್ಲಾಗಲೀ ಕೆಲಸ ಮಾಡುವುದರಲ್ಲಾಗಲೀ ಬಹಳ ಹಿಂದೆ ಬಿದ್ದಿದ್ದೇವೆ. ನೆಹರೂಜೀಯವರೂ ಸಹ ಆಗಿಂದಾಗೆ ಈ ರೀತಿ ಹೇಳುತ್ತಿರುತ್ತಾರೆ, ಅದನ್ನು ನಾನೂ ಒಪ್ಪುತ್ತೇನೆ. ಒಂದು ಸರಕಾರ ಐದು ವರ್ಷದಲ್ಲಿ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಾರೆ. ಹಾಗೇ ಸರಕಾರದ ಅವಧಿಯೂ ಕೂಡ ಐದು ವರ್ಷಗಳು. ಐದು ವರ್ಷಗಳಲ್ಲಿ ಏನು ಮಾಡಿದ್ದೇವೆ ಎನ್ನುವುದನ್ನು ಜನಗಳ ಮುಂದೆ ವಿವರವಾಗಿ ಹೇಳುವುದು. ಇಷ್ಟೇ. ಈ ಐದು ವರ್ಷಗಳಲ್ಲಿ ನಿಮ್ಮ ಪ್ರಣಾಳಿಕೆಯ ಪ್ರಕಾರ ಈ ದೇಶದಲ್ಲಿ ನಿಮ್ಮ ಸೋಷಿಯಲಿಸ್ಟಿಕ್ ಪ್ಯಾಟರ್ನು ಎನ್ನುವುದು ಪಕ್ವವಾಗಿದೆಯೇ? ಆ ದೃಷ್ಟಿಯಿಂದ ಹೋದರೆ ನಾವು ಹೋಗುವ ವೇಗದಲ್ಲಿ ನಾವು ಆರ್ಥಿಕವಾಗಿ ಸಾಂಸ್ಕೃತಿಕವಾಗಿಯಾಗಲ್ಲೀ ಮುಂದುವರಿಯುತ್ತಿದ್ದೇವೆಯೇ, ಅಷ್ಟನ್ನೂ ಉಳಿಸಿಕೊಂಡಿದ್ದೇವೆಯೇ ಎನ್ನುವ ಅಳತೆಯ ಕೋಲನ್ನು ಹಿಡಿದು ಗಮನಿಸಿಲ್ಲವೆಂದು ನಾನು ಇಲ್ಲಿ ಹೇಳುತ್ತೇನೆ. ಐದು ವರ್ಷಕ್ಕೊಂದು ಸಾರಿ ಪ್ರತಿಯೊಂದು ಸರಕಾರವೂ ರಾಜಿನಾಮೆ ಕೊಡುತ್ತದೆ. ಆಗ ಅವರನ್ನು ಜನರ ಮುಂದೆ ನಿಲ್ಲಿಸಿ ನ್ಯಾಯ ವಿಚಾರಣೆಗೆ ಗುರಿಪಡಿಸಬೇಕು. ಇದರೊಳಗೆ, ನಾವು ನೀವು ಸೇರಿರುವುದರಿಂದ ನಾವೆಲ್ಲರೂ ಚೆನ್ನಾಗಿ ಕೆಲಸ ಮಾಡಿದ್ದೇವೆಯೇ ಎನ್ನುವುದಕ್ಕೆ ಒಂದು ಅಳತೆ ಕೋಲು ಇರಬೇಕಾಗುತ್ತದೆ.

ನಾನು ಹೇಳಿದ್ದು ತಮಗೆ ಅರ್ಥವಾಗಲಿಲ್ಲ. ಈ ಬಿಲ್ಲಿನ ಮೇಲೆ ಮಾತನಾಡಿ ಮುಗಿಸಿದ ಮೇಲೆ, ಇನ್ನು ಏನು ಮಾಡಲಿ

You have become great by simply sticking to truth.

ಈ ದೃಷ್ಟಿಯಿಂದ ನಾನು ಕೇಳಿಕೊಳ್ಳುತ್ತೇನೆ. ನಾನು ಕೊಟ್ಟ ಸಲಹೆಯನ್ನು ಒಂದು ಬಿಲ್ಲಿನೊಳಗೊ, ರೂಲಿನೊಳಗೊ ತೆಗೆದುಕೊಂಡು ಬಂದು 5 ವರ್ಷದ ಅಧಿಕಾರವಧಿ ಆದ ಮೇಲೆ ಮಂತ್ರಿಗಳಿಗೆ ತತ್ವಬಾಹಿರ ವ್ಯವಹಾರ ದೃಷ್ಟಿಯಿಂದ ಮತ್ತು ದೇಶದ ಆರ್ಥಿಕ ಧಕ್ಕೆಯ ದೃಷ್ಟಿಯಿಂದ ಎರಡು ತಿಂಗಳ ಕಾರಾಗೃಹ ಪರಮಾವಧಿ ಶಿಕ್ಷೆಗೆ ಮುಂದಿನ ಎಲೆಕ್ಷನ್ ಸಮಯದಲ್ಲಿ, ನಿಮ್ಮ ಪಾರ್ಟಿಯಲ್ಲಾಗಲಿ ಅಥವ ಇನ್ನೆಲ್ಲೊ ಸೇರಿ, ಯಾರು ಯಾರು ಏನೇನು ಅಪರಾಧಗಳನ್ನು ಮಾಡಿದ್ದಾರೆ, ಎಷ್ಟೆಷ್ಟು ಇಂಪ್ರಿಸನ್‌ಮೆಂಟ್ ಕೊಡಬೇಕು ಅಂತ ನಿರ್ಧರಿಸಿದರೆ ಆವಾಗ ನಿಮ್ಮ ಕರ್ತವ್ಯ ಚೆನ್ನಾಗಿ ಮಾಡಬೇಕೆಂಬ ಪ್ರೇರಣೆ ಬರುತ್ತದೆ. ಆ ಮೇಲೆ ಈ ಪ್ರಿಸನರುಗಳು ಸರಿಯಾಗಿ ನಡೆದುಕೊಳ್ಳುವುದಕ್ಕೆ ಮೇಲ್ಪಂಕ್ತಿಯಾಗುತ್ತದೆ, ಮತ್ತು ಎಷ್ಟೋ ಸರಿಹೋಗುತ್ತದೆ.

ನಮ್ಮ ಅಧ್ಯಕ್ಷರು ನನಗೆ ಇಷ್ಟು ಅವಕಾಶಕೊಟ್ಟದ್ದಕ್ಕೆ ಅವರನ್ನು ವಂದಿಸಿ ಕೂತುಕೊಳ್ಳುತ್ತೇನೆ.

†ಶ್ರೀ ಟಿ. ಜಿ. ಸತ್ಯನಾರಾಯಣ (ಬಳ್ಳಾರಿ).—ಸ್ವಾಮಿ, ನಾನು ಬಹಳ ದಿವಸದಿಂದ ಜೈಲಿಗೆ ವಿಸಿಟರ್ ಆಗಿದ್ದೇನೆ. ಬ್ರಿಟಿಶರ ಕಾಲಕ್ಕೂ ಈಗ್ಗೂ ನೋಡಿದರೆ ಜೈಲುಗಳ ಸ್ಥಿತಿ ಬಹಳ ಸುಧಾರಿಸಿದೆ. ಬ್ರಿಟಿಷರ ಕಾಲದಲ್ಲಿಯೂ ಏನಾದರೂ ನೆಪ ಹಾಕಿಕೊಂಡು ಜೈಲಿಗೆ ಹೋಗುತ್ತಾ ಇದ್ದೆ. ಈಗ್ಗೂ ಆಗ್ಗೂ ಬಹಳ ವ್ಯತ್ಯಾಸವಿದೆ. ಈಗ ಬಹಳ ಸೌಕರ್ಯಗಳನ್ನು ಮಾಡಿದ್ದಾರೆ. ಶ್ರೀ ರಾಜಗೋಪಾಲಚಾರಿಯವರು 1937 ರಲ್ಲಿ ಮದ್ರಾಸು ಮುಖ್ಯಮಂತ್ರಿಗಳಾಗಿದ್ದಾಗ, ಅಲಿಪುರ್ ಜೈಲಿನಲ್ಲಿ ಹಾ ಅನ್ನುವವರು ಜೈಲರ್ ಆಗಿದ್ದರು. ಅವರು ಖೈದಿಗಳಿಗೆ ಕೊಟ್ಟಷ್ಟು ತ್ರಾಸು ಯಾರೂ ಕೊಟ್ಟಿಲ್ಲ, ಇನ್ನು ಮುಂದೆಯೂ ಯಾರೂ ಅಷ್ಟು ಕೊಡಲಾರರು. ಈಗ ಜೈಲುಗಳು ಬಹಳ ಇಂಪ್ರೂವ್ ಆಗಿವೆ. ಪೊಲಿಟಿಕಲ್ ಪ್ರಿಸನರುಗಳಿಗೂ, ಕ್ರಿಮಿನಲ್ ಪ್ರಿಸನರುಗಳಿಗೂ ಟ್ರೀಟ್‌ಮೆಂಟ್‌ನಲ್ಲಿ ಹೆಚ್ಚಿಗೆ ವ್ಯತ್ಯಾಸವಿಟ್ಟಿಲ್ಲ. ನ್ಯಾಯವಾಗಿ ನೋಡಿದರೆ ಕ್ರಿಮಿನಲ್ ಪ್ರಿಸನರುಗಳಿಗೆ ಕಠಿಣವಾದ ಪರಿಸ್ಥಿತಿ ಏರ್ಪಡಿಸಿ, ಅವರಿಗೆ ಇನ್ನೂ ಹೆಚ್ಚಿಗೆ ತ್ರಾಸು ಕೊಡಬೇಕು. ಅದು ಇಲ್ಲದ ಸಲುವಾಗಿ ದಿವಸ ದಿವಸಕ್ಕೂ ಕಳ್ಳತನಗಳು, ಖೂನಿಗಳು ಜಾಸ್ತಿಯಾಗುತ್ತಾ ಇವೆ. ಅವರಿಗೆ ಪನಿಷಮೆಂಟು ಇನ್ನೂ ಸ್ವಲ್ಪ ಹೆಚ್ಚಾಗಿ ಕೊಡಬೇಕು. ಜೈಲಿನೊಳಗೂ ಇಷ್ಟು ಸೌಲಭ್ಯಗಳನ್ನು ಕೊಟ್ಟು, ಕಷ್ಟವಿಲ್ಲದೆ ಹಾಯಾಗಿಟ್ಟರೆ, ಅವರು ಅಪರಾಧಗಳನ್ನು ಮಾಡುವುದನ್ನು ಹೆಚ್ಚಿಸುತ್ತಾರೆ. ಇದರ ಸಲುವಾಗಿ ಅವರ ಮೇಲೆ ಸ್ವಲ್ಪ ಕಠಿಣ ಪರಿಸ್ಥಿತಿ ಹೊರಿಸಿ, ಚೆಕಿಂಗ್ ಜಾಸ್ತಿ ಇಡಬೇಕು.

ಈ ಖೈದಿಗಳಿಗೆ ವಿದ್ಯಾಭ್ಯಾಸಕ್ಕೆ ಸೌಲಭ್ಯಗಳಿವೆ. ಕೆಲವರು ಎಜುಕೇಷನ್ ಸೌಲಭ್ಯಗಳೇ ಅವರಿಗಿಲ್ಲವೆಂದು ಹೇಳಿದರು. ಅದನ್ನು ಇನ್ನೂ ಸ್ವಲ್ಪ ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿದ್ದ ಕೆಲವು ಖೈದಿಗಳನ್ನು ಅಲಿಪುರ ಜೈಲಿಗೆ, ಬೆಳಗಾಂ ಜೈಲಿಗೆ ಕಳುಹಿಸಿದ್ದಾರೆ. ಇದನ್ನು ಸರಿಯಾಗಿ ಮಾಡಿದ್ದಾರೆ. ಆದರೆ ಇದರಿಂದ ಪ್ರಿಸನರುಗಳಿಗೆ ಸ್ವಲ್ಪ ತ್ರಾಸು ಆದ ಹಾಗೆ ಕಾಣುತ್ತದೆ.

ಇಷ್ಟು ಮಾತನಾಡಲು ಅಪ್ಪಣೆ ಕೊಟ್ಟ ಸಲುವಾಗಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರ).—ಸ್ವಾಮಿ, ಈ ಮಸೂದೆ ಬೇಕಾದಷ್ಟು ಚರ್ಚೆಯಾಗಿದೆ. ನಾನು ಒಂದು ಕ್ಲಾಸಿನಲ್ಲಿ ಮಾತ್ರ ಕಾಂಪ್ಲಿಕೇಶನ್ ಬೇಕು, ಉತ್ತರ ಬೇಕು ಎಂದು ಕೇಳಲು ನಿಂತಿದ್ದೇನೆ. Section 7 ರಲ್ಲಿ, procedure where officer in-charge of prison doubts the legality of warrant sent to him for execution ಹೇಳಿದ್ದೀರಲ್ಲ. ಇದರ ಬಗ್ಗೆ ತಿಳಿಯುವ ಆತುರನಾಗಿದ್ದೇನೆ. ಒಂದು ವಾರೆಂಟ್ ಅಥವ ಆರ್ಡರ್, ಎಕ್ಸಿಕ್ಯೂಶನ್ನಿಗೆ ಕಳುಹಿಸಿದ್ದರೆ, ಅದರ ಲೀಗ್ಯಾಲಿಟಿ ಬಗ್ಗೆ ಅನುಮಾನ ಕಂಡು ಬಿಟ್ಟರೆ, ಆಫೀಸರು ಅದನ್ನು ಸರಕಾರಕ್ಕೆ ಕಳುಹಿಸಿ, ಆ ರೆಫರೆನ್ಸ್ ಬಗ್ಗೆ ಆರ್ಡರ್ ಪಡೆಯಬೇಕೆಂದಿದೆ. ಯಾವುದಾದರೂ ಜೈಲಿನಲ್ಲಿ ಇಂಥ ಅನುಮಾನ ಬಂದಂಥ ನಿದರ್ಶನಗಳಿವೆಯೇ ? ಇದ್ದರೆ ಎಷ್ಟು ಸರ್ತಿ ಅಂಥ ಇಲ್ಲೀಗಾಲಿಟಿಗಳು ಸರಕಾರದ ಗಮನಕ್ಕೆ ಬಂದಿವೆ. ಮತ್ತು ಸರಕಾರದವರು ಎಷ್ಟು ಸಲ ಅವುಗಳ ಮೇಲೆ ತೀರ್ಮಾನ ಕೊಟ್ಟಿದ್ದಾರೆ ; ಕೋರ್ಟಿನವರು ಆರು ತಿಂಗಳು ಶಿಕ್ಷೆ ಕೊಟ್ಟಿದ್ದೇವೆ, ಕಠಿಣ ಸಜ ಕೊಟ್ಟಿದ್ದೇವೆ, ಆ ಖೈದಿಗೆ ಎ. ಬಿ. ಸಿ. ಹಾಗೆ ಏನೋ ಒಂದು ಕ್ಲಾಸ್ ಟ್ರೀಟ್‌ಮೆಂಟ್ ಕೊಡಬೇಕೆಂದು ಹೇಳಿ, ಸೀಲ್ ಹಾಕಿ ಕಳುಹಿಸಿದ ಆರ್ಡರನ್ನು ಒಬ್ಬ ಜೈಲು ಅಧಿಕಾರಿ ಕೊಶ್ಚನ್ ಮಾಡುವುದೇ, ಅಥವ ಸರ್ಕಾರ ಒಂದು ಜುಡಿಶಿಯಲ್ ಆರ್ಡರ್ ಸರಿಯೇ ತಪ್ಪೇ ಎಂದು ನಿರ್ಧರಿಸಿ ಅದರ ಮೇಲೆ ಒಂದು ಆಜ್ಞೆಮಾಡಿ ಜೈಲಿಗೆ ಕಳುಹಿಸುವುದು ಸರಿಯೇ ? ಸರಕಾರಕ್ಕೆ ಕೋರ್ಟಿನ ತೀರ್ಪಿನ ಮೇಲೆ ಏನು ಅಧಿಕಾರವಿದೆ, ಯಾವ ದೃಷ್ಟಿಯಲ್ಲಿ ಕೋರ್ಟಿನ ವಾರೆಂಟ್ ಅಥವ ಆರ್ಡರ್ ಬಗ್ಗೆ ಅನುಮಾನ ತಲೆದೋರುತ್ತದೆ ? ಇದು ನನಗೆ ಅರ್ಥವಾಗುತ್ತಿಲ್ಲ. ಒಂದು ಸುಳ್ಳು ಅಫಿಶಿಯಲ್ ಸೀಲ್ ಹಾಕಿ, ಒಂದು ಆರ್ಡರಿಗೆ ಫೋರ್ಜಡ್ ಸಿಗ್ನೇಚರ್ ಹಾಕಿ, ಅದು ಕೋರ್ಟ್ ಆರ್ಡರು ಎಂದು ಅಪರಾಧಿಗೆ ತೆಗೆದುಕೊಂಡು ಬಂದ ಸಂದರ್ಭ ಯಾವುದಾದರೂ ಇದೆಯೇ ? ಸರ್ಕಾರದವರು ಏನು ಅಭಿಪ್ರಾಯ ಈ ಸೆಕ್ಷನ್ ಇಟ್ಟುಕೊಂಡಿದ್ದಾರೆ ಅನ್ನುವುದನ್ನು ಕಂಡು ಹಿಡಿಯುವುದಕ್ಕೆ ನನಗೆ ಕಷ್ಟವಾಗಿದೆ' ಸರ್ಕಾರದ ನಿರ್ದಿಷ್ಟವಾದ ಅಭಿಪ್ರಾಯ ಈ ಕ್ಲಾಸಿನ ಬಗ್ಗೆ ಏನು ಅಂತ ತಿಳಿಸಬೇಕು ಅಂತ ಇಷ್ಟೊಂದು ಕೇಳಿ, ನಾನು ಕೂತುಕೊಳ್ಳುತ್ತೇನೆ.

Sri R. M. PATIL.—Mr. Speaker, Sir, the suggestions offered by the Hon'ble Members are worth to be noted and those that are practical will be followed. As regards the improvements either in diet or in other facilities, in education and such other matters, Government is keen to treat the prisoners with comforts which can be afforded reasonably in the interests of those prisoners. But at the same time Government shall have to take into consideration that the prisoners should also feel the warmth of law. Otherwise, it is merely a reformatory school. There the opinions differ. What the refomers are saying they say only from one point of view. They forget that the prisoners are culprits or convicted persons. Government is taking interest, knowing full well that they have committed offences and they are convicted and at the same time Government wants to treat them on a par with other civilised people in order to see that they are cured and they are better off.

While saying this, three factors are necessary. One is, to see that their mind is diverted from the agony of conviction. For that, there should be education, which is according to his education and his psychology. While doing that, labour also will be one of the factors. This should be according to his bent of mind. Therefore, there are certain types of labour prescribed. Some prefer carpentry and they learn it ; some prefer weaving and some prefer designing. A number of avocations have been designed and have been practised and they are in vogue. Even printing and designing have been introduced in Gulbarga as well as in Bangalore jails.

(SRI R M. PATIL)

4-00 P. M.

Another aspect is, how they should be fed and what is the requirement for a human body to be maintained in good health. To-day, the food ration is 24 ounces of food—rice or ragi or wheat or jawar for convicted prisoners; 20 ounces for unconvicted prisoners per day in addition to other things. Mutton of 4 ounces is given once a week.

Sri V. S. PATIL.—But, practically, nothing is given.

Sri R. M. PATIL.—Sir, I know meat is not a necessary food for every human being. That is one aspect of it. Further, I know in villages how many times they take meat. The point for consideration is, how to maintain good health of these prisoners. Then, the third aspect is, the social aspect. That should be changed and the view of the prisoner must be changed. They should develop broader views. For that, library books are supplied, radios are supplied and lectures are also arranged. In addition to this, dramatic performances and sports are also arranged. So, all these facilities are given to them.

Coming to the clauses of the Bill, many suggestions have been made by friends and no amendment is suggested to the Bill. Sri Muckannappa only asked for clarification of clause 7. If such a doubt arises in the mind of the executive authority, the procedure has been laid down there. Instead of allowing or detaining the prisoner in a doubtful manner, they treat the prisoner as suggested in clause 2 till the doubt is cleared by the Government. It is only a stop-gap arrangement and that too if such an occasion arises.

Sir, for mental study, psychological study and all that, arrangements have been made by appointing specialists in Psychology and Sociology. One or two suggestions have been made in respect of health arrangements. Sir, there si a good deal of improvement in these days. If there is any difiency in the staff of the medical personnel, it is a general deficiency in the State. But, care has been taken to see that the prisoners do not suffer on account of deficiency in medical personnel. This is my reply to the various suggestions made by Hon'ble Members.

Sri V. S. PATIL.—I want one clarification. There are some regulations for giving remissions in sentences passed against prisoners according to their behaviour in the prison. If a prisoner behaves well, then certain remissions are recommended and it was there in the Bombay Prisons Code. I want to know what Government does in such cases.

Sri R. M. PATIL.—Sir, concessions have been given and rules have been prescribed and they have been working satisfactorily. As regards Liaison Officer, the Liaison Officer in Bangalore has interviewed 1405 prisoners and enquiries were made in the case of about 868. Employment secured for them is to the tune of 75—73 males and 2 women. Number of prisoners who were given protection in the Liaison Hostel is 52. About 23 prisoners admitted in State Homes, District Shelters and Reception Centres. In Bellary, interviewed prisoners are about 1,224;

enquiries about 93 where in clothing and bedding was sought by 45 released prisoners. Employment secured to 43 and for 21 protection and shelter was given in Liaison Hostel. In Belgaum 14 employments were secured; 40 were given accommodation in Liaison Hostel and shelter to 22 was given in District places. So, every care has been taken. There is one difficulty, that is, after the release of these prisoners, with all the best care, education and social environments, everyone likes to go back to his village, however inconvenient it may be, because that is a natural psychology. If we take that aspect, it is very difficult to establish an industry as suggested by my hon'ble friends, either in Bangalore or district headquarters. There is also another difficulty, *i.e.*, if these released prisoners are prepared to stay at a particular place, there will be a possibility of providing them with some work. But they want to go back to their homes in the villages, and nothing could be done. Another aspect of the matter is even if they are managed to assemble in an industry in an urban area, it is not possible to provide them with houses though it is possible to give them work. What is contemplated to be done now is that such of those persons who receive training in khadi and village industries like spinning, weaving, carpentry and the like are recommended to join Khadi Kendras. If they earn money during imprisonment, they are paid on release and that would be a great help.

With these words, I commend the Bill for the consideration of the House.

ಶ್ರೀ ಎಸ್. ಗೋಪಾಲ ಗೌಡ.—ಖೈದಿಯು ಜೈಲಿನಿಂದ ಹೊರಗೆ ಬಂದಾಗ್ಗೆ ಅವನಿಗೆ ಜೈಲಿನಲ್ಲಿ ತರಬೇತಿಯಾಗಿದೆ, ಕೈಗಾರಿಕೆಯಲ್ಲಿ ಕೆಲಸ ಕೊಡಿ ಎಂದು ನೇರವಾಗಿ ಹೇಳತಕ್ಕಂಥ ಒಂದು ಏನಾದರೂ ವ್ಯವಸ್ಥೆ ಇದೆಯೇ ?

SRI R. M. PATIL.—For that purpose the liaison officer is there.

SRI D. PARAMESHWARAPPA.—I wish to offer a suggestion. The prisoners can, on their release, be engaged in developmental works. That would result in a lot of saving to the Government also.

SRI R. M. PATIL.—Government is thinking of employing them in projects. Thereby open jails or jails without doors or rooms would be provided.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಖಾದೀ ಬೋರ್ಡಿಗೆ ಅವರನ್ನು ಕಳಿಸುತ್ತೇವೆಂದು ಉತ್ತರ ಹೇಳಿದರು. ಈಗಾಗಲೇ ಅಲ್ಲಿ ಜನ ಹೆಚ್ಚಾಗಿ ಬಿಟ್ಟು ಅದು ಇದಾಗಿ ಹೋಗಿಬಿಟ್ಟಿದೆ. ಇವರನ್ನೂ ಅಲ್ಲಿ ಸೇರಿಸಿದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಒಂದು ಸಲಹೆ ಮಾಡುತ್ತೇನೆ. ಒಳ್ಳೇ ಭೂಮಿ ಇರುವ ಕಡೆ ಭೂಮಿ ಕೊಟ್ಟು ವ್ಯವಸಾಯ ಮಾಡಲು ಅಲ್ಲಿಗೆ ಕಳಿಸಬೇಕು ಅಲ್ಲವೇ ?

SRI R. M. PATIL.—That suggestion will be taken into consideration.

MR. SPEAKER.—The question is:

"That the Mysore Prisoners Bill, 1962, be taken into consideration."

The motion was adopted.

Clauses 2 to 12

Mr. SPEAKER.—The question is :

"That clauses 2 to 12, both inclusive, stand part of the Bill."

The motion was adopted.

Clauses 2 to 12, both inclusive, were added to the Bill.

Clause 1, The preamble and the title.

Mr. SPEAKER.—The question is :

"That clause 1, the Title and the Preamble stand part of the Bill.

The motion was adopted.

Clause 1, the Preamble and the Title were added to the Bill.

Motion to pass

Sri R. M. PATIL.—I beg to move :

"That the Mysore Prisoners Bill, 1962 be passed."

Mr. SPEAKER.—The question is :

"That the Mysore Prisoners Bill, 1962 be passed."

The motion was adopted.

THE MYSORE PROHIBITION OF SMOKING IN SHOW HOUSES AND PUBLIC PLACES BILL, 1963.

Motion to consider.

Sri R. M. PATIL.—I beg to move :

"That the Mysore Prohibition of Smoking in Show Houses and Public Places Bill, 1963, be taken into consideration."

Mr. SPEAKER.—Motion moved :

"That the Mysore Prohibition of Smoking in Show Houses and Public Places Bill, 1963, be taken into consideration."

Sri R. M. PATIL.—This is a measure which has been introduced and adopted by the Legislative Council. This bill is intended to bring in uniformity of legislation in this matter. In the old Mysore Area and in Coorg there are acts governing smoking in public places but in the Madras, Bombay and Hyderabad Karnatak areas there are no enactments